# ಕೊರವಂಜಿ

KURAVANJI
Kannada Monthly



ಅಕ್ಟೋಬರ್
೧೯೬೫

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ ಅ. ರಾ. ಸೇ.
ಶ್ರೀಮತಿ ಟಿ. ಸುನಂದಮ್ಮ
ಶ್ರೀ॥ ಬಚ್ಚ
ಶ್ರೀ॥ ಕುಮಾರ್
ಶ್ರೀ॥ ಆನಂದ
ಶ್ರೀ॥ ಪ್ರಸಾದ್
ಶ್ರೀ॥ ಹೆಚ್. ಎಸ್. ರಾವ್
ಶ್ರೀಮತಿ॥ ಮೀರಾರಾಣಿ
ಶ್ರೀಮತಿ॥ ರಾಮಿ
ಶ್ರೀ॥ ದಾಶರಥಿದೀಕ್ಷಿತ್
ಇತ್ಯಾದಿ ಇತ್ಯಾದಿ.

೨೫ ಪೈ.

ಳಿನಗೆಯ ಮಾಸಪತ್ರಿಕೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

# ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

# ಕೊರವಂಜಿ

A. ANANTHIAH.

ಸಂಪುಟ ೨೪] ಅಕ್ಟೋಬರ್ ೧೯೬೫ [ಸಂಚಿಕೆ ೭


## ಕುಹಕಿಡಿಗಳು

ಹೆಸರಿಗೆ ತಕ್ಕಂತೆ ಲಾಲ್ ಬಹದ್ದೂರ್ ಶಾಸ್ತ್ರಿಗಳು
" ಓಂ ಶಾಂತಿ ಶಾಂತಿ ಶಾಂತಿಃ "
ಎಂದು ಮಂತ್ರ ಪಠಣಮಾಡಿ ಆಚರಣೆಗೆ ತಂದರು,

* * * *

೨೪೦ ಕೋಟಿ, ಇಲಿ ಹೆಗ್ಗಣಗಳು ನಮ್ಮ ದೇಶದಲ್ಲಿವೆಯಂತೆ.

—ದಾಸ್ತಾನುಮಳಿಗೆಗಳಲ್ಲಿ ಸಂಬಳ ತೆಗೆದುಕೊಂಡಿರುವುವು ಈ ಲೆಕ್ಕದಲ್ಲಿ ಸೇರಿಲ್ಲವಂತೆ.

* * * *

ಆಟ ಆಡೋವಾಗ ಸೋತು ಹೋದರೆ ತುಂಟು ಹುಡುಗ "ಚೆಂಡನ್ನು ಎಂಜಲು ಮಾಡಿ ಬಿಡ್ತೀನಿ; ಆಮೇಲೆ ಹೇಗೆ ಆಡ್ತೀರಿ, ನೋಡ್ತೀನಿ" ಎಂದು ಅಳುತ್ತಿದ್ದ.

—ಇದು ಜ್ಞಾಪಕಕ್ಕೆ ಬಂತು "ನಾವು ಯೂನೋ ಬಿಟ್ಟು ಬಿಡ್ತೀವಿ, ಕಾಶ್ಮೀರ ನಮಗೆ ಕೊಡಿಸದೆ ಇದ್ದರೆ" ಎಂದು ಭುಟ್ಟೊ ಹೇಳಿಕೊಂಡು ಅತ್ತಾಗ.

* * * *

"ದಿಳ್ಳಿಯಲ್ಲಿರುವ "ಸಂಪರ್ಕ ಸುಜನರ" ಪಟ್ಟಿಯೊಂದನ್ನು ತಯಾರಿಸಲಾಗಿದೆ, ಆದರೆ ಬಹಿರಂಗಪಡಿಸುವಂತಿಲ್ಲ" ಎಂದು ಸಚಿವರು ಹೇಳಿದರಂತೆ.

—ಹೇಗೆ ಬಹಿರಂಗ ಪಡಿಸಲು ಸಾಧ್ಯ! ವ್ಯಾಪಾರಿ ಸಂಸ್ಥೆಗಳ "ಸಂಪರ್ಕ ಸುಜನ"ರು, ಪ್ರತಿ ರಾಷ್ಟ್ರದ ರಾಜಕೀಯ ಪುಡಾರಿಗಳೇ ಆಗಿರುವಾಗ!

ಈ ಸಾರಿ ದಸರಾದಲ್ಲಿ—ನಾಡಹಬ್ಬವನ್ನು ಒಮ್ಮನಸ್ಸಿನಿಂದ ಭಾರತೀಯರೆಲ್ಲರೂ ಆಚರಿಸಬಹುದು.

*   *   *   *

ಬಲಾ ಹುಷಾರಿ, ನಮ್ಮ ಸರ್ದಾರ್ ಜೀ !

—ಸಾಬರ್‌ಜಟ್ ಪ್ಲೇನಿನ ಚೂರುಗಳನ್ನು ಪೇಪರ್ ವೈಟ್ ಹಾಗೆ ಆಕಾರಮಾಡಿ, ಸಾಬರ್ ಜಟ್ ಪೇಪರ್ ವೈಟ್ ಎಂದು ಕರೆದು ಸುಮಾರು ಲಾಭಕ್ಕೆ ಮಾರುತ್ತಿದ್ದಾನೆ.

*   *   *   *

ಗೊರಿಲ್ಲಾ ಯುದ್ಧದಲ್ಲಿ ಚೀಣಿಯರು ಪ್ರಬಲರಾಗಿದ್ದಾರಂತೆ.

—ಆ ತರಹ ಯುದ್ಧಕ್ಕೆ ಆ ಹೆಸರು ಯಾಕೆ ಬಂತು ಅನ್ನೋದು, ಅವರ ಚಿತ್ರಗಳನ್ನು ನೋಡಿದಮೇಲೆ ತಿಳಿಯಿತು.

*   *   *   *

ಫಕ್ತ್ಯಾನಿಸ್ಥಾನ್ ಜನರು Cease-Fire ಅನ್ನು Seize & Fire ಅಂತ ತಿಳಿದುಕೊಂಡು ಹಾಗೆಯೇ ಆಚರಿಸುತ್ತಿದ್ದಾರಂತೆ.

*   *   *   *

ಮೊನ್ನೆ ಮಿಟಿಕಲಾಡಿ ಮೀನಾಕ್ಷಿಗೆ ಮದುವೆ ಆಯ್ತಲ್ಲ ! ಆಗ ಅವರ ಅಮ್ಮ ಮಗಳಿಗೆ ಲಟ್ಟಣಿಗೆಯನ್ನು ಉಡುಗೊರೆಯಾಗಿ ಕೊಟ್ಟರಂತೆ. ಅದನ್ನು ಕಂಡು ವರನ ತಾಯಿ ಲಟ್ಟಣಿಗೆ ಮಣೆಯನ್ನು ಮಗನಿಗೆ ಕೊಟ್ಟು ಇದನ್ನು ಗುರಾಣಿಯಂತೆ ಉಪಯೋಗಿಸಿ ಬದುಕಿಕೊಳ್ಳಪ್ಪ ಎಂದು ಹರಸಿದಳಂತೆ.

*   *   *   *

ಹೊಸ ವಿಮಾನವೊಂದು ನೇರನೆ ಮೇಲಕ್ಕೆ ಹಾರಿ, ಜಟ್ಟಂತ ಕೆಳಗಿಳಿದು ಬೇಕಾದಾಗ ಮಧ್ಯದಲ್ಲೇ ಸ್ವಲ್ಪ ಕಾಲ ನಿಲ್ಲುವುದಂತೆ.

—ಪ್ರಗತಿ ಇದೇ ರೀತಿ ಮುಂದುವರೆದರೆ. ಇಂತಹ ವಿಮಾನದಂತಹ ಕಾಲ್ನಡಿಗೆಯ ಜನರೂ ಸಿದ್ಧವಾಗಬಹುದು. ರಸ್ತೆಯ ವಾಹನ ಅಪಘಾತಗಳೂ ನಿವಾರಣೆಯಾಗಬಹುದು.

*   *   *   *

ಈ ಸಾರಿ ಮಹಾನವಮಿಯ ಪೂಜೆಗೆ ನಮ್ಮ ಆಯುಧಗಳೆಲ್ಲವೂ ಥಳಥಳಿಸುತ್ತಿರುವುವು: ಎಂದು ಧೈರ್ಯವಾಗಿ ಹೇಳಬಹುದು.

*   *   *   *

ನವರಾತ್ರಿ ಬೊಂಬೆ ಇಡುತ್ತಿದ್ದ ನಮ್ಮ ೭ ವರ್ಷದ ಬಕುಳ, ಎರಡು ಮುರಿದ ಪಾಟನ್ ಟ್ಯಾಂಕ್. ಒಂದು ಒಡೆದ ಸಾಬರ್‌ಜಟ್ ತಂದುಕೊಡಪ್ಪ ; ಬೊಂಬೆಯುದ್ಧ ಮಾಡಿಸ್ಬೇಕು ಎಂದು ಕೇಳಿದಳು.

# ಜಾತಕ ಬಲ

ನನ್ನ ಜಾತಕವೇ ಹಾಗೆ! ಮೊದಲಿನಿಂದಲೂ ಹಾಗೆ! ತಪ್ಪು ನನ್ನದಲ್ಲ!

ಹಳ್ಳಿಹಳ್ಳಿಗೂ, ದೇವಸ್ಥಾನ ದರ್ಗಾಗಳಿಗೂ, ಭೇಟಿ ಇತ್ತಿದ್ದೂ ಇತ್ತಿದ್ದೆ! ಆದರೆ ಒಬ್ಬರಾದರೂ ಒಂದು ರೂಪಾಯಿನ ಊದು ಕಡ್ಡಿಗಳಿಗೆ "ಆರ್ಡರ್" ಕೊಡ ಬೇಕಲ್ಲ! ಮೂರು ತಿಂಗಳು ಸುತ್ತಿ, ಸುತ್ತಿ, ಕಡೆಗೆ ಹತ್ತು ರೂಪಾಯಿನ ಆರ್ಡರ್ ತೆಗೆದುಕೊಂಡು ಬಂದು, ನಮ್ಮ ಧಣಿಗಳಿಗೆ ಕೊಟ್ಟೆ. ಪ್ರಯಾಣ, ಊಟ, ತಿಂಡಿ ವಗೈರೆಯ ಖರ್ಚು ಎಪ್ಪತ್ತು ರೂಪಾಯಿ ಅಂತ ವರದಿಪಟ್ಟಿ ಒಪ್ಪಿಸಿದೆ. ಮೂರು ತಿಂಗಳು, ಈಗಿನ ಕಾಲದಲ್ಲಿ ಬಸ್ಸು ಬಂಡೀಲಿ ಪ್ರಯಾಣ ಮಾಡಿ, ಸಿಕ್ಕ ಸಿಕ್ಕ ಹೋಟ ಲಲ್ಲಿ ಹೊಟ್ಟೆ ಹೊರಬೇಕಾದರೆ ಎಪ್ಪತ್ತು ರೂಪಾಯಿ ಸಾಕೇನ್ರೀ! ಆದರೂ "ಆರ್ಡರ್" ಸಿಗಲಿಲ್ಲವಲ್ಲ ಅಂತ ಎರಡು ದಿನಕ್ಕೆ ಒಂದು ಪ್ಲೇಟ್ ಊಟ ರಾತ್ರಿ ೨ ಬಾಳೆಹಣ್ಣು ಕಡಲೆಕಾಯಿ ಹೀಗೆ ಸಾಧು ಸಂತರ ತರಹ ಜೀವನ ನಡೆಸಿದ್ದೆ.

"ಅಲ್ಲಯ್ಯಾ! ಮೂರು ತಿಂಗಳಿಗೆ ಎಪ್ಪತ್ತು ರೂಪಾಯಿ ಖರ್ಚು ಮಾಡಿ, ಹತ್ತು ರೂಪಾಯಿ ಆರ್ಡರ್ ತಂದಿದಿ. ಅಂದರೆ ನಮಗೆ ಬಂದ ಲಾಭ .೨ ರೂಪಾಯಿ ಖರ್ಚು ೭೦. ನಷ್ಟಟಾಲ್ ಮನುಷ್ಯ. ನಿಂಗೆ ವ್ಯಾಪಾರದ ಮರ್ಮವೇ ತಿಳಿಯದು. ಒಂದು ತಿಂಗಳ ನೋಟೀಸ್ ಕೊಡ್ತೀನಿ. ಆಮೇಲೆ ಕೆಲಸದಿಂದ ವಜಾ" ಅಂತ ಧಣಿಗಳು ಹೇಳಿದರು. ಅವರು ಹೇಳಿದ್ದು ನ್ಯಾಯವೇ! ಅನ್ನಿಸಿತು.

ಈ ಒಂದು ತಿಂಗಳೂ ದುಡಿಯೋಣ ಅಂತ ಊರಿನಲ್ಲೇ ಊದುಕಡ್ಡಿ ಗಂಟು ಗಳನ್ನು ಹಿಡಿದುಕೊಂಡು ಹೊರಟೆ, ಪ್ರತಿ ಒಂದು ದೇವಸ್ಥಾನದ ಪಾರುಪತ್ತೇ ಗಾರರೂ ಇಪ್ಪತ್ತು ಇಪ್ಪತ್ತು ರೂಪಾಯಿನ ಮಾಲು ಕೊಂಡರು. ಒಂದೇ ತಿಂಗಳಿ ನಲ್ಲಿ ಎರಡು ಸಾವಿರ ರೂಪಾಯಿ ವ್ಯಾಪಾರವಾಯಿತ್ತು.

ಧಣಿಗಳ ಹತ್ತಿರ ಹೋದೆ. "ನೀವು ನಮೂದಿಸಿದ ಅವಧಿ ಮುಗಿಯಿತು. ನಾಳೆಯಿಂದ ಕೆಲಸಕ್ಕೆ ಬರಬೇಕಾಗಿಲ್ಲ ಅಲ್ಲವೇ" ಎಂದು ಕೇಳಿದೆ. ಆತ ಲೆಕ್ಕದ ಪುಸ್ತಕ ನೋಡಿದ. "ಹೋದ ತಿಂಗಳು ಭರ್ಜರಿ ವ್ಯಾಪಾರ ಮಾಡಿದ್ದಿ; ಕೆಲಸದ ಮೇಲೇ ಇರು" ಎಂದು ನಗ್ತಾ ಹೇಳಿದರು.

ತಿರುಗಿ ನನ್ನ ಜಾತಕ ಪಲ್ಟಿ ಹೊಡೆಸಿತು; ನನ್ನ ವ್ಯಾಪಾರ ಸೌಭಾಗ್ಯವನ್ನು ಮುಂದಿನ ಮೂರು ತಿಂಗಳೂ ಒಟ್ಟು ಮೂವತ್ತು ರೂಪಾಯಿನ ವ್ಯಾಪಾರ ಆಗಲಿಲ್ಲ. ತಿರುಗಿ ಧಣಿಗಳು ಕರೆಸಿ ಉಗಿದು ಬೈದು, ಇನ್ನೊಂದು ತಿಂಗಳ "ನೋಟೀಸ್" ಕೊಟ್ಟು ಕಳಿಸಿದರು, ಅದಾದ ಹತ್ತೇ ದಿನಗಳಲ್ಲಿ ಸಾವಿರ ರೂಪಾಯಿಗಳ ಆರ್ಡರ್ ದೊರಕಿತು. ಆಮೇಲೆ ಒಂದೇ ವಾರದಲ್ಲಿ ಸಾವಿರ ರೂಪಾಯಿಗಳ ಆರ್ಡರ್ ಸಿಕ್ಕಿತು. ಅವಧಿಯ ಕಡೇ ವಾರದಲ್ಲಿ ಎರಡು ಸಾವಿರ ರೂಪಾಯಿಗಳ ಆರ್ಡರ್ ಸಿಗೋಣವೇ?

ಧಣಿಗಳು ಕರೆಸಿದರು. ನೋಟೀಸನ್ನು ತಿರುಗಿ ವಾಪಸ್ ಪಡೆದರು. ಭೇಷ್ ಅಂತ ಬೆನ್ನು ತಟ್ಟಿದರು.

ಜಾತಕ ಫಲ ಕೂಡ ಮಲೇರಿಯಾದ ತರಹ ಮರುಕಳಿಸುತ್ತೆ. ನೋಟೀಸ್ ಹಿಂತೆಗೆದುಕೊಂಡ ಕೂಡಲೇ ವ್ಯಾಪಾರ ಇಳಿಮುಖವಾಯ್ತು. "ಹೀಗ್ಯಾಕೆ" ಅಂತ ಯೋಚಿಸಿದೆ. "ಓಹೋ ! ಶನಿ ಆರರಲ್ಲಿದ್ದಾನೆ. ನನಗೆ ಒದೆತ ಬಿದ್ದರೇ ವ್ಯಾಪಾರ ಕುದುರೋದು" ಎನ್ನುವ ತೀರ್ಮಾನಕ್ಕೆ ಬಂದೆ.

ಆರು ತಿಂಗಳು ದುಡಿದೆ. ಕತ್ತೆ ದುಡಿದ ಹಾಗೆ ದುಡಿದೆ. ಓದಿದ ಸೊಸೆ ಇರೋ ಮನೇಲಿ ಮುದುಕಿ ಅತ್ತೆ ದುಡಿದ ಹಾಗೆ ದುಡಿದೆ. ಏನೂ ಪ್ರಯೋಜನವಾಗಲಿಲ್ಲ. ನಾನೇ ಧಣಿಗಳತ್ತ ಹೋದೆ. "ಸ್ವಾಮಿ ಒಂದು ತಿಂಗಳ ಅವಧಿ ಕೊಟ್ಟು ಕೆಲಸದಿಂದ ತೆಗೆದು ಹಾಕಿ ಬಿಡಿ ನನ್ನನ್ನು" ಎಂದು ಬೇಡಿದೆ. ನನ್ನ ಮುಖವನ್ನೇ ಅವರು ದಿಟ್ಟಿಸಿ ಒಂದು ಕ್ಷಣ ನೋಡಿದರು. ಆಮೇಲೆ ಲೆಕ್ಕದ ಪುಸ್ತಕ ನೋಡಿದರು. "ನಮ್ಮ ಸಂಸ್ಥೆಗೆ ಹೋದ ವರ್ಷ ೮೦ ಸಾವಿರ ರೂಪಾಯಿ ವ್ಯಾಪಾರ ಕುದುರಿಸಿ ಕೊಟ್ಟಿದಿ. ಇಂತಹ ನಿಷ್ಠಾವಂತ ಕೆಲಸಗಾರರಿಗೆ ನಮ್ಮ ಮೆಚ್ಚಿಕೆಯನ್ನು ಸೂಚಿಸಬೇಕು. ಅಂತ ಹುದರಲ್ಲಿ ನೋಟೀಸ್ ಕೊಡಿ ಎಂದು ಏಕೆ ಕೇಳಿದೆ. ಸಂಬಳ ಸಾಲದು ಅಂತಲೇ? ಬೇರೆ ಯಾರಾದರೂ ಹೆಚ್ಚು ಸಂಬಳದ ಆಸೆ ತೋರಿಸಿದ್ದಾರೆಯೇ?" ಎಂದು ಕೇಳಿದರು.

ದಿಗ್ಭ್ರಮೆಯಾಯಿತು ನನಗೆ. ಮಾತೇ ಹೊರಡಲಿಲ್ಲ. ವ್ಯಾಪಾರ ಕುದುರಲಿ ಎಂದೇ ನೋಟೀಸ್ ಕೊಡಿ. ಅದು ನನ್ನ ಜಾತಕ ಬಲ ಅಂತ ಕೇಳಿದ್ದೆ. ಆದಕ್ಕೆ ಧಣಿ ಈ ರೀತಿ ಮೆಚ್ಚುಗೆಯ ನುಡಿ ನುಡಿದರೆ ? ಏನು ಹೇಳೋದು ?

"ಯಾಕಯ್ಯಾ ! ಮಾತಾಡುಲ್ಲ. ನಿನ್ನ ಸಂಬಳವನ್ನು ಈ ತಿಂಗಳಿನಿಂದ ಐವತ್ತು ರೂಪಾಯಿಗಳಷ್ಟು ಹೆಚ್ಚಿಸುತ್ತೇನೆ. ಹೋಗಯ್ಯ ! ಸಂತೋಷವಾಯ್ತೇನಯ್ಯ ತಿರುಗಿ "ನೋಟೀಸ್" ಮಾತಾಡಬೇಡ" ಎಂದರು ಧಣಿಗಳು.

ತಿರುಗಿ ನೋಟೀಸ್ ಮಾತಾಡಲಿಲ್ಲ.

ಆಮೇಲೆ ತಿಳಿಯಿತು. ನೋಟೀಸ್ ನನಗೆ ಬಂದಾಗಲೆಲ್ಲಾ ದೇಶದ ತುರ್ತು ಪರಿಸ್ಥಿತಿ ಉಲ್ಬಣಗೊಳ್ಳುತ್ತಿತ್ತು. ಆಗ ದೇವಸ್ಥಾನ, ದರ್ಗಗಳಲ್ಲಿ ಹೆಚ್ಚುವರಿ ಪೂಜೆ ಹಾಕುತ್ತಿದ್ದರು. ಕಾರಣ ಊದುಕಡ್ಡಿ ವ್ಯಾಪಾರ ಅಟ್ಟಕ್ಕೇರುತ್ತಿತ್ತು ನಂತರ ತಣ್ಣಗಾಗುತ್ತಿತ್ತು.

ಮುಖ್ಯ ನನ್ನ ಜಾತಕ ಬಲ, 'ದೇಶದ ಜಾತಕ ಬಲಕ್ಕೆ ಬಲವಾಗಿ ಅಂಟಿಕೊಂಡಿದೆ.

—ಕುಮಾರ್.

# ವೀರಣ್ಣನ ಡಿಫೆನ್ಸ್ ಎಫರ್ಟ್

★

ಇದೀಗ ವೀರಗಾದೆಗಳ ಕಾಲ. ಹಾಸ್ಯಕ್ಕೆ ಇದು ಸಮಯವಲ್ಲ. ಕರುಳನ್ನು ಕಿಂಕ್ಕಿ ನಗೆಯನ್ನು ಹೊರಕ್ಕೆ ಬರಿಸುವಂತಹ ಜೋಕುಗಳೇ ನಮ್ಮಲ್ಲಿ ಮೊಂಡಾದಮೇಲೆ ಬರಿಯ ತಿಳಿನಗೆ ಯಾರಿಗೆ ಕಚಗುಳಿ ಕೊಟ್ಟೀತು ? ಹೀಗೆನ್ನಲು ಕಾರಣವಿಷ್ಟೆ,

ನನ್ನ ಪ್ರಿಯಮಿತ್ರ ವೀರಣ್ಣ ಹುರಿಗಡಲೆಯೊಂದಿಗೆ ಪಿಸುಮಾತನ್ನಾಡಿದಮೇಲೆ ಊರಿಗೆ ಹಿಂತಿರುಗಿ ಬಂದು ಅಂತರ್ಮುಖಿಯಾದನೆಂದು ನೀವು ಬಲ್ಲಿರಷ್ಟೆ. ಅವನ ಆ ಅನುಭವವನ್ನು ನಾನು ಬರೆದು ಜಗಜ್ಜಾಹೀರು ಮಾಡಿದೆನಷ್ಟೆ. ಅದರಿಂದ ಅವನು ನನ್ನಮೇಲೆ ಅತೀವಕೋಪಾವಿಷ್ಟನಾಗಿರಬಹುದೆಂದು ನೀವು ಊಹಿಸಿರಬಹುದಲ್ಲವೇ ? ಅವನು ನನ್ನ ಮೇಲೆ ಕೋಪಾವಿಷ್ಟನಾದುದೇನೋ ನಿಜ. ಕಾರಣವೇನೆಂದರೆ, ಹುರಿಗಡಲೆಯೊಂದಿಗೆ ಅಂತರಂಗದ ಮಾತುಗಳನ್ನಾಡಿದ ಸಂತೋಷಾರ್ಥವಾಗಿ ವೀರಣ್ಣನು ತನ್ನ ಮಿತ್ರರೆಲ್ಲರಿಗೆ ಸೀ, ಕಾರ, ಕಾಫಿ ಕೊಡಿಸಬೇಕಾಗಿ ಬಂತು.

" ಲೇ, ಅದ್ಯಾವನೋ ಈ ಊರ್ನೆಗೆ ಹುರಿಗಡ್ಲೆ ಜೊತ್ಗೆ ಕಾರ್ನೆಗೆ ಕುಂತ್ಗಂಡನು! ಬಾರ್ಲೇ ದುಬ್ಬೀರ್ಗಾ, ಭಾನ್ಸಲೇ ನಿಂದು. ಇರದೊಂದಿನ, ಹೋಗದೊಂದಿನ. ದುಡ್ಕನಾವನೋ ತಿನ್ನನ್ಯಾವನೋ, ಕೊಡ್ಸಲೇ ಮೈಸೂರ್ಪಾಕ, ತರ್ಸಲೇ ಮಸಾಲಿ ದೋಸೆ, ಕುಡ್ಸೋ ಕಾಫಿ, "

ಇತ್ಯಾದಿ ಉದ್ಗಾರಗಳೊಂದಿಗೆ ಅವನ ಮಿತ್ರರು ಅವನಿಂದ ಹದಿನೆಂಟು ರೂಪಾಯಿ ಮೂವತ್ತಾರು ಪೈಸೆ ಬಿಚ್ಚಿಸಿ, ಇದು ಮುಂದೆ ಬರಲಿರುವ ಡಿನ್ನರಿಗೆ ನಾಂದಿ ಎಂದು ಖಚಿತ ಸೂಚನೆ ಕೊಟ್ಟರು. ಅವರ ಪೈಕಿ ನಾನೊಬ್ಬನಲ್ಲ ಎಂಬುದನ್ನು ತಮಗೆ ತಿಳಿಸಬೇಕಾಗಿದೆ.

ಈ ಎಲ್ಲ ಲುಕ್ಸಾನುಗಳಿಗೂ ಕಾರಣನಾದ ನನ್ನ ಮೇಲೆ ವೀರಣ್ಣ ಸ್ವಲ್ಪ ಸಿಟ್ಟಾಗಿದ್ದರೆ ನಾನು ಅವನನ್ನು ಆಕ್ಷೇಪಿಸಲಾರೆ.

ಆದರೆ ತನ್ನ ಅಜ್ಞಾತವಾಸವನ್ನು ಮುಗಿಸಿದ ವೀರಣ್ಣ ಲೋಕಕ್ಕೆ ಪ್ರಕಟನಾದುದು ಕವಿಯಾಗಿ, ವೀರಕವಿಯಾಗಿ ಎಂದ ಮೇಲೆ ಇದು ಹಾಸ್ಯಕ್ಕೆ ಸಮಯವಲ್ಲ ಎಂದು ಮತ್ತೆ ನಾನು ಹೇಳಬೇಕೆ ?

ಒಂದಲ್ಲ ಎರಡು ಯುದ್ಧಗಳನ್ನು ವಿಧಿ ಭಾರತದ ಮೇಲೆ ಹೇರಿತು. ಶಾಂತಿ ಪ್ರಿಯ ರಾಷ್ಟ್ರಕ್ಕೊದಗಿದ ಈ ವಿಧಿ ವಿಡಂಬನದ ಜೊತೆಗೆ ಈ ವರ್ಷ ಕಳೆದ ಒಂದು ತಿಂಗಳು ಮಳೆಯೂ ಬರಲಿಲ್ಲ.

ಆತ್ಮರಕ್ಷಣೆಗಾಗಿ ಹೋರಾಡುವ ನಮಗೆ ಪ್ರಕೃತಿಯೂ ವಿಮುಖವಾದರೆ ಅದು ನಮ್ಮ ದುರ್ದೈವವೋ, ನಮ್ಮದು ಧರ್ಮದೂರ ನಿಲುವೆಯೋ. ಬೆಂದ ಬಿದಿಗೆ ಕಣ್ಣಿಲ್ಲವೋ, ಅಥವಾ ದಿವ್ಯ ಸುಂದರನೂ. ದರಹಾಸೋಜ್ವಲನ್ಮುಖನೂ, ವರದನೂ, ಅನಾಥರಕ್ಷಕನೂ, ಕೃಪಾಸಮುದ್ರನೂ ಆದ ಭಗವಂತನು

"ಕಾಲೋಸ್ಮಿ ಲೋಕಕ್ಷಯಕೃತ್......" ಎಂದು ಘೋಷಿಸಲು ಈಗಲೇ ಮುಹೂರ್ತ ಹುಡುಕಿದನೋ ಎಂದು ಅನುಮಾನ ಹುಟ್ಟಿತ್ತು.

ಪಬ್ಲಿಕ್ ಪರೀಕ್ಷೆಗೆ ಸೂಪರ್‌ವಿಜನ್ ಇತ್ತು ಹತ್ತೂಕಾಲು ಗಂಟೆಗೆ ಶಾಲೆಗೆ ಸೇರಬೇಕು. ಹತ್ತು ಗಂಟೆ ಐದು ನಿಮಿಷಕ್ಕೆ ಮನೆಯಿಂದ ಹೊರಟೆ. ಆಕಾಶದಲ್ಲಿ ಇದ್ದಕ್ಕಿದ್ದಂತೆ ಕಪ್ಪು ಮೋಡಗಳು ಕವಿದವು ಸುಳಿಗಾಳಿ ಬೀಸಿತು, ರಪರಪನೆ ಕುಂಭ ದ್ರೋಣ ಮಳೆ ಆರಂಭವಾಗಿಯೇ ಬಿಟ್ಟಿತು ಪ್ಯಾಟನ್ ಟ್ಯಾಂಕಿನ ಗುಂಡಿನ ಆಕಾರದಲ್ಲಿ ಮಳೆ ಹನಿಗಳು ಬೀಳಲಾರಂಭಿಸಿದವು. ಹತ್ತು ಸೆಕೆಂಡುಗಳಲ್ಲೇ ಟಾರ್ ರೋಡಿನಲ್ಲಿ ಪ್ರವಾಹ ಆರಂಭವಾಯಿತು. ಕೈಲಿ ಕೊಡೆಯಿಲ್ಲ. ತೊಪ್ಪನೆ ತೊಯ್ದುಹೋದೆ.

ಕಿಂಕರ್ತವ್ಯ ವಿಮೂಢನಾಗಿ ಮಳೆಯ ನಡುವೆ ನಿಂತ ನನ್ನ ಕಾಲುಗಳಿಗೆ ಅಂಬ್ಯಾಸಡರ್ ಕಾರೊಂದು ಹಿಂದಿನಿಂದ ಬಂದು ಲಘು ಡಿಕ್ಕಿ ಹೊಡೆಯಿತು. ಜೋಲಿ ತಪ್ಪಿದರೂ ಸಾವರಿಸಿಕೊಂಡು ನಿಂತೆ, ಹೀಗೆ ಡಿಕ್ಕಿ ಹೊಡೆಸಿದವನು ವೀರಣ್ಣನಲ್ಲದೇ ಇನ್ನಾರೂ ಆಗಿರಲು ಸಾಧ್ಯವಿಲ್ಲ ಆದುದರಿಂದ ಕಾರಿನಲ್ಲಿ ಕುಳಿತೇ ಸ್ಕೂಲಿಗೆ ಹೋದರಾಯ್ತು ಎಂದುಕೊಂಡೆ.

"Give me a lift to School ದುಬ್ಬೀರ್ಗಾ" ಎನ್ನುತ್ತಾ ಕಾರು ಹತ್ತಿದೆ. "ಹೊತ್ತಾಯ್ತು ಇನ್ನೈದು ನಿಮಿಷದಲ್ಲಿ ನಾನು ಸಾಲಿ ಮುಟ್ಬೇಕು" ಎಂದೆ.

ವೀರಣ್ಣ ಚಿಂತಾಮಗ್ನನಾಗಿ ಸ್ಟೀರಿಂಗನ್ನು ಹಿಡಿದು ಕುಳಿತ.

ಬ್ಯಾಗ ಹೊಂಡೋ. ಇನ್ನು ಮೂರು ನಿಮಿಷಕ್ಕೆ ನಾನು......"

"ಈ ಕಾರ್ಗೆ ಹಾರನ್ನಿಲ್ಲಲೇ ರಾಯ. ಈ ಮಳೆ ಹುಚ್ಚು ಹೊಡ್ತ ಹೊಡಿತತೆ, ಇನ್ನೂ ನಿಮ್ಹಾಗಿಲ್ಲ ಚರಂಡಿ ತುಂಬಿ ರೋಡಿಗೆ ನುಗ್ಗ್ಯತೆ ನೀರು;"

"ಲೇ ಹಾರನ್ನಿಲ್ದ ಲಟಗೇರಿ ಕಾರು ಯಾಕೊಡ್ಡತಿ! ಹುರಿಗಡ್ಲೆಗಾದರೆ ಫ್ರೀ ಲಿಫ್ಟ್ ಕೊಡ್ತಿ. ನಮ್ಮಂಥ ತರಕಲ್ಗಡ್ಡದ ಮಂದಿಗೆ ನಿನ್ನಿಂದ ಯಾವ ಪ್ರಯೋಜ್ನನೂ ಇಲ್ಲಲೇ ?"

" ಮಳೆ ಸ್ವಲ್ಪ ಕಡ್ಮಿ ಆಗತಂಕ ತಡ್ಕೋ. ಈ ಹಾರನ್ಬ್ಯಾರೆ ಕೈಕೊಟ್ಟೈತೆ. ಸ್ವಲ್ಪ ಇದನ್ನೋಡು " ಎಂದ ವೀರಣ್ಣ ನನ್ನ ಕೈಗೆ ಒಂದು ಕಾಗದವನ್ನು ತುರುಕಿದ.

ಹುರಿಗಡಲೆಯ ವಿರಹದಿಂದ ತಪ್ತನಾಗಿ, ಆತ್ಮಹತ್ಯೆಗೆ ಉದ್ಯುಕ್ತನಾಗಿ, ವಿಶಾಲ ವಿಶ್ವವನ್ನು ಕ್ಷಮಿಸಿ ಪರಂಧಾಮದತ್ತ ಹೊರಟಿರುವೆನೆಂದು ಬರೆದ ಅವನು ನನಗೆ ಆ ಕಾಗದವನ್ನು ಕೊಟ್ಟನೇನೋ ಎಂದು ಭಾವಿಸಿದ್ದ ನನಗೆ ಮೊದಲನೆಯ ಅಕ್ಷರವನ್ನು ನೋಡಿದೊಡನೆ ಷಾಕ್ ಹೊಡೆದ ಹಾಗಾಯಿತು.

" ಭುಟ್ಟೋ. ಬೊಗಳೆಯ ಹುಚ್ಚುನಾಯಿ ಭುಟ್ಟೋ
ನಿನ್ನ ಚರ್ಮವ ಸುಲಿದು ಹೊಲಿಸುವೆನು........"

" ವಹ್ವಾ......ಷಾಭಾಷ್ ವೀರ್‍ಯಾ ಎಂಥ ಸ್ಪಿರಿಟ್ಟು ಐಡಿಯ, ಎಂಥ ಪ್ರಾಸ. "

" ಮುಂದುಕೋದಲೇ, ರಾಯಾ. "

" ಏ ಎಲೆ ಅಯೂಬ, ಕೇಡಿಗ ಮೊತ್ನೆಟಂಗ್ಯಾ
ಬಾಲ ಬಿಚ್ಚಿದೆಯ ಏನಂತತಲೆ ಮುಂಗ್ಯಾ "

This is the limit ದುಬ್ಬಿರ್‍ಯಾ. It is tops. ನಂಗೆ ಕೂಡ ಹಿಂಗೆ ಬರೆಯಂಕ್ಕೆ ಸಾಧ್ಯಾಗ್ತಿರಲಿಲ್ಲ. ಎಲ್ಲಿಂದ ಬಂತೋ ಈ ಸ್ಪಿರಿಟ್ಟು. ಏನ್ಜಪ ಮಾಡ್ತಿದ್ಯಾ. ತಪಸ್ಮಾಡಿದ್ಯಾ, ಬ್ಯಾಗ ಸ್ಟಾರ್ಟ್ ಮಾಡೋ ಕಾರು. ಆ ಕಡೆ ಚರಂಡಿ ಈ ಕಡೆ ಚರಂಡಿ ಏಕಾತು."

" ಅಲ್ಲೋ ನಮ್ಮೂರ್ನಿಗೇ ಇಷ್ಟು ವದ್ಯಾಡನು ಇನ್ನು ವಾರ್ ಫ್ರಂಟಿನಗೆ...."

ಅವನು ಇಷ್ಟು ಮಾತನಾಡುವಷ್ಟರಲ್ಲಿ ನೀರು ಗಾಲಿಗಳ ಅರ್ಧದಷ್ಟಕ್ಕೇರಿತು. ಹತ್ತು ಗಂಟೆ ಹತ್ತು ನಿಮಿಷವಾಯಿತು, ಸ್ಟಾರ್ಟರ್ ಒತ್ತಿದ. ಕಾರು ಸ್ಟಾರ್ಟ್ ಆಗಲಿಲ್ಲ.

" ಇಳಿ. ದಬ್ಬು ಕಾರ್ನ " ಎಂದ.

" ಇಳ್ದರೆ ಪ್ಯಾಂಟ್ ಗತಿಯೇನು. ನಾನು ಇದನ್ನ ದಬ್ಬಿ ಇದು ಸ್ಟಾರ್ಟ್ ಆಗಿ, ನಾನು ಸಾಲಿ ಸೇರಿ, ಪರೀಕ್ಷೆ ನಡೆಸಿ......"

" ಹೋಗ್ಗಿ ಕುಂದ್ರು " ಎಂದ ವೀರಣ್ಣ ಅದೇನೋ ಕಸಬು ಮಾಡಿ ಕಾರ್ ಸ್ಟಾರ್ಟ್ ಮಾಡಿದ. ಡ್ರೈವ್ ಮಾಡುತ್ತಾ ನನಗೆ ಹೇಳಿದ. " ಅಲ್ಲೋ ಇನ್ನೂ ಲಾಹೋರ್ ಸಿಗ್ಲಿಲ್ಲ, ಸಿಯಾಲ್ಕೋಟೆ ಹಂಗೇ ಐತೆ. ಏನಾರ ಮಾಡ್ದಿದ್ರೆ ಅವ್ರು ಹಂಗೇ ಬಿಗತ್ಗಂತರೆ. "

ನೀನು ಹುರಿಗಡ್ಲೆ ಚಿಂತ್ಯಗೆ ಕುಂತಿರು. ಲಾಹೋರ್ ಸಿಗ್ತತೆ! ಅಲ್ಲೋ ಲಾಹೋರ್ ತಗಂಡು ಏನ್ಮಾಡ್ತಿ ? ಅಲ್ಲಿರಗ್ಗೆ ಕೂಳು ಹಾಕ್ತಾ ಕುತ್ಗಂತಿಯಾ. ಇಲ್ದಿದ್ರೆ

ಪಾಕಿಸ್ತಾನ್ದರು ಮಾಡಿದ್ಹಂಗೆ ಕೈ ಕಾಲು ಮುರ್ದರು, ಹೆಂಗಸ್ರು, ಮಕ್ಕಳು, ಹೆಳವರು, ಕುರುಡ್ರು ಅವರ್ಮ್ಯಾಲೆಲ್ಲಾ ಬಾಂಬ್ ಹಾಕಿ ಕೊಲ್ಲಿಯೋ ? ಇದು ಹೊಸ ಥರ ಯುದ್ಧನೋ. ಹಿಂದಿನ ಯುದ್ಧಲ್ಲ. ನಾವು ಸುಮ್ನಿದ್ರೂ ಅವನು ಕೀಟ್ಲೆ ಮಾಡ್ತನೆ. ಅದನ್ನ ತಪ್ಸಕ್ಕೆ ಈ ಯುದ್ಧ. ಕೆಟ್ಟ ಹುಳಗಳ ಹಲ್ಲು ಮುರಿದ್ರೆ ಆತು. "

" ಈ ಚೀನಾದರು ಬ್ಯಾರೆ ಗುರ್ರ್ರಂತರೆ !"

" ಅನ್ಲೇಳು ಈರ್ಣಾ. Come one and come all! "

" ಸೈ ಬಿಡ್ಲೇ ರಾಯ. ನಾನು ಹಂಗೇ ಅಂದ್ಕಂತಿದ್ದೆ. ನೀನು ಹೇಳಿದ್ಮ್ಯಾಲೆ ಗಟ್ಯಾತು. "

" ಮತ್ತೆ ನಿಂದೇನು ಸಹಾಯ ದೇಶಕ್ಕೆ ?"

" ನಿಂದು ? "

" ನಂದೇ ? ನನ್ಕೆಲ್ಸ ನಾನ್ಮಾಡ್ತೀನಿ. ಮೈಯೆಲ್ಲಾ ಬಟ್ಟೆಲ್ಲಾ ತೋಯ್ತೋ ಇಲ್ಲೋ. ತೊಯ್ಲಿ. ಹಿಂಗೇ ಸೂಪರ್‌ವಿಷನ್ ಮಾಡ್ತಿನಿ.

" ನಾನೇ ? ಈ ಊರ್ನಗೆ ಇರ ಕಾರ್ ಓನರುಂಗ್ಳೆಲ್ಲಾ ಡಿಫೆನ್ಸ್ ಫಂಡಿಗೆ ಐದ್ನೈದ್ನೂರು ರೂಪಾಯಿ ಮೊದ್ಲ ಕಂತು ಕೊಡ್ರಿ " ಅಂತ ಅಲ್ಟಿಮೇಟಂ ಕೊಟ್ಟಿದಿನಿ.

" ಕೊಡ್ದಿದ್ರೇನ್ಮಾಡ್ತಿ ?"

" ಅವ್ರ ಕಾರು ಒಂದಲ್ಲ ಒಂದಿನ ನನ್ನ ಕೈಗೆ ಸಿಗ್ತವೆ. ಅಷ್ಟ್ ಹೇಳಿದ್ರೆ ಸಾಲ್ದೇನೋ?"

" ನೀನೇ ಯಾಕೆ ಮಿಲ್ಟ್ರಿ ಸೇರ್ಬಾರ್ದು ಈರಣ್ಣಾ "

" ಸೇರಕ್ಹೋಗಿದ್ನ್ಯೋ. ನಿಂಗೆ ತೂಕ ಸಾಲ್ದು ಅಂದ್ರು "

" ನೀನು ವಜನ್ದಾರಿ ಮನ್ಸ್ಯಾ ಅಲ್ಲ ಅಂತ ಅವರಿಗೂ ತಿಳಿತೇ ! ಶಿವಶಿವ !"

" ಈಗ ಇಬ್ರೂ ನಮ್ಮ್ಯಾಮೇಲೆ ಬಿದ್ರೆ ಸ್ವಲ್ಪ ಕಷ್ಟನೇ ಅನ್ಸು."

" ಯಾರಿಗೆ ?"

" ನಮ್ಯಾಲ್ಬಿದ್ದವರಿಗೆ ಅಂತಿಯಾ ಅವರಿಗೆ ಸಹಾಯ ಬಲು ಜೋರೈತಲ್ಲೋ ?"

" ಇರ್ಲೀ. ಇನ್ನೂ ಜೋರಾಗಿ ಸಹಾಯ ಸಿಗ್ಲಿ. " ವೀರಣ್ಣ ನಕ್ಕ. ಆದೂ ಸರೀನೇ ಅನ್ನು ಅವರಿಗೆ ಕೊಟ್ಟ ಬಾಂಬು, ಟ್ಯಾಂಕು, ಇಮಾನು ಎಲ್ಲ ನಮ್ಕ್ಯಾಗೇ ಸಿಗ್ತತೆ. "

" ಅಲ್ದೇ ನಮ್ಗೆಂಥ ಲುಕ್ಸಾನು ?"

" ಹೌದಂ ಬಿಡಂ. ನಾವು ಕಳ್ಕಂಬದಂ ಏನೇನೂ ಇಲ್ಲ. ನಮ್ಮ ಒಡ್ವೆ. ಆಸ್ತಿ. ಈ ಮೈಯಿ ನಮ್ಮ ಪ್ರಾಣ. ಇವ್ಯಾವ್ಯಾವೂ ನಮ್ದಲ್ಲ. ಇದ್ನೆಲ್ಲಾ ತಾಯೀ ನಮ್ಮವ್ವಾ ಭಾರತಮಾತೇ ನೀಂದೇ ಇವೆಲ್ಲ ಅಂತ ಕೊಟ್ಬಿಟ್ಟು ಎಷ್ಟೋ ದಿನಾತಂ. ಆ ಮೃಗಗಳು ತಮಂದ್ದು ನಮಂದ್ದು ಅಂತ ಬಡ್ಕಂತಮೇ. ರಾಯಂಲೇ ಬರ್ಲಿ ಅವ್ರೆಲ್ಲ ತೋರಿಸ್ತಿವಿ " ಎನ್ನುತ್ತಾ ವೀರಣ್ಣ ಬ್ರೇಕ್ ಹಾಕಿದ. ಶಾಲೆಯಂಲ್ಲಿ ಸೀದಾ ಹತ್ತೂಕಾಲಾಗಿತ್ತು ಬೆಲ್ ಹೊಡೆಯಿತು.

"ಉಬ್ಬಾರ್ದ್ಲೇ ವೀರಣ್ಣ. ಶತ್ರುಗಳು ಪ್ರಬಲರಂ. ಭಂಟ್ರೋ ಇನ್ನಾವ್ರು ವರ್ಷ ಹೊಡ್ದಾಡಕ್ಕೆ ಸಿದ್ಧವಂತೆ, ಇಂಥ ಕಪ್ಪೆಲಾಟಗಳಂ ಏಸಿದ್ದಾವು, ಈವತ್ತು ಸಂಜ್ಗೇನೋ ಮಂಂಜಾನ್ಗೇನೋ. ನಾವ್ರು ವರ್ಷ ಯಾತಕ್ಹೊಡ್ದಾಡ್ತನಂತೆ. ಇನ್ನೆಳ್ಡ್ ವರ್ಷ ಇವ್ನು ಬದ್ಕಿತ್ತನೋ ಇಲ್ಲೋ. ಬದ್ಕಿದ್ರೂ ಇವನ್ನ ಅವ್ರು ಉಳಿಸ್ಗಂತರೋ ಇಲ್ಲೋ.

ಭಂಟ್ರೋ ನೆಣಗೊಬ್ಬಿನಲಿ ಒದರದಿರಂ ಭಂಟ್ರೋ
ಈ ಲೋಕದಿಂದ ಗುಡಿಚಾಪೆಯನಂ ಕಟ್ರೋ.

**ಎಲವೊ ತಿಳಿಗೇಡಿ ಮಹಾಮೂರ್ಖನೆ ಸುಕರ್ನೊ**
**ಹೌಡು ಹರಿದೇನು............**

ವೀರಕವಿ ವೀರಣ್ಣ ಗೀತೆಯಂನ್ನು ಮಂಗಿಸುವ ಮೊದಲೇ " ಮತ್ತೆ ಲಾಹೋರಿನಲ್ಲಿ ಭೇಟಿಯಾಗೋಣ ವೀರಣ್ಣ ಬೈ ಬೈ " ಎಂದಂ ಶಾಲೆಯೊಳಕ್ಕೆ ಹೋದೆ. ಸುಕರ್ನೋಗೆ ಪ್ರಾಸ ಏನಂ ಹುಡುಕಿದ್ದನೋ ಆಗ ತಿಳಿಯಂಲಿಲ್ಲ.

ಅ. ರಾ. ಸೇ.

---

ಚಕ್ಕುಲಿ ಒರಳನಂ ಹಿಡಿದಳು ಸಾತು
ತುಸಂ ಬಾಗುತ,ಅರೆ ನಿಂತಳು ಸಾತಂ
ಚಕ್ಕುಲಿ ಹಿಟ್ಟನ್ನು ಒತ್ತಿಡುವಾಗ
ಕೈಗಳ ತಾನು ಆಡಿಸುವಾಗ
ಸೊಂಟವ ಕೂಡ ತಿರುವಿದಳು ; ಸಾತು ।

* * * *

ಮಂಂದೂರಿನಲ್ಲಿ ಒಬ್ಬ ಸರ್ಜನಿರುವನು
ರೋಗಿಗಳನಂ ಹೆಚ್ಚಿಬಿಡುವ ಧೈರ್ಯವಂತನು.
ಒಮ್ಮೆ ಚೌರ ಮಾಡುವಾಗ
ಸಣ್ಣ ಪೆಟ್ಟು ಗಲ್ಲಗಾಕೆ
ಬಾಯಿ ಬಡಿದುಕೊಂಡು ಅವನು ಅತ್ತುಬಿಟ್ಟನು.

# ಇರುವೆ ಗೂಡು

---

ನಡುಮನೆ ಅಂಚಿನಲ್ಲಿ ಪುಟ್ಟ ವೆಂಕಟು ಕೂತು ತನ್ನ ಪಾಡಿಗೆ ತಾನು ಆಟ ಆಡಿಕೊಳ್ಳುತ್ತಿದ್ದ. "ನಾಲ್ಕು ವರ್ಷದ ಮಗು, ಎಷ್ಟು ಗಂಭೀರವಾಗಿ ಆಡಿಕೊಂಡಿದೆಯೋ" ಎಂದು ರಂಗಜ್ಜಿ ನೆಟಿಗೆ ಮುರಿದು ಅಡಿಗೆ ಮನೆಗೆ ಹೋದರು. ಸ್ವಲ್ಪ ಹೊತ್ತಿನಲ್ಲೇ ಮಗು ಕಿಠಾರಂತ ಕಿರಿಚಿಕೊಂಡಿತು. "ಏನಾಯ್ತು, ಏನಾಯ್ತು" ಅಂತ ರಂಗಜ್ಜಿ ಅಡಿಗೆ ಮನೆಯಿಂದ ಓಡಿ ಬಂದರು. ಬಚ್ಚಲಮನೆಯಿಂದ ಮುಖ ತೊಳೆದುಕೊಳ್ಳುತ್ತಿದ್ದ ಮೀನಾಕ್ಷಿ ಓಡಿಬಂದಳು. ನೋಡಿದರೆ ಕೆಂಪಿರುವೆ ಮಗುವಿನ ಮೇಲೆಲ್ಲಾ ಹರಿದಾಡುತ್ತಿದೆ, ಅಲ್ಲಲ್ಲೇ ಕಚ್ಚಿದೆ. ಬೇಗ ಮೀನಾಕ್ಷಿ ಮಗುವನ್ನೆತ್ತಿಕೊಂಡು ಬಟ್ಟೆಯನ್ನೆಲ್ಲಾ ಬೇಗ ಬಿಚ್ಚಿ, ಮೈಯನ್ನೆಲ್ಲಾ ಝಾಡಿಸಿದಳು. ಗೋಡೆ ಅಂಚಲ್ಲಿ ಏನಾಗಿದೆ ಅಂತ ರಂಗಜ್ಜಿ ನೋಡ್ತಾಳೆ! ಅಲ್ಲೊಂದು ಕೆಂಪಿರುವೆ ಗೂಡು ಲಾಗಾಯ್ತಿನಿಂದ ಇದ್ದದ್ದೇ. ಇರುವೆಗಳು ಅವುಗಳ ಪಾಡಿಗೆ ಅವು ಆಟ ಆಡಿಕೊಂಡು ತಮ್ಮ ಪಾಡಿಗೆ ತಾವು ಇವೆ. ಪುಟ್ಟ ವೆಂಕಟು ಅವುಗಳನ್ನು ನೋಡಿ, ಗೋಡೆ ಅಂಚಿನಲ್ಲಿದ್ದ ತೂತಿಗೆ ಹುಂಚಿ ಕಡ್ಡಿ ಹಾಕಿ ತಿವಿದಿದ್ದಾನೆ. ಅವೆಲ್ಲಾ ಗೂಡಿನಿಂದ ಕೆರಳಿ ಹೊರ ಬಂದು ಕಂಡ ಕಂಡ ಕಡೆ ಹತ್ತಿ ಸಿಕ್ಕಿದ್ದನ್ನು ಕಚ್ಚಿವೆ. ವೆಂಕಟು ಬೊಬ್ಬೆ ಹಾಕ್ತಾ ಇದಾನೆ.

ಅಷ್ಟು ಹೊತ್ತಿಗೆ ಆಫೀಸಿನಿಂದ ಅಪ್ಪ ಬಂದರು. "ಯಾಕೇ ? ಮಗು ಹಾಗೆ ಹೊಡ್ಕೋತಾ ಇದೆ ?" ಎಂದು ಕಾತರದಿಂದ ಕೇಳಿದರು. ರಂಗಜ್ಜಿ ಎಲ್ಲವನ್ನೂ ವಿಶದವಾಗಿ ತಿಳಿಸಿದರು, "ತನ್ನ ಪಾಡಿಗೆ ತಾನು ನಗ್ತಾ ಆಡಿಕೊಂಡಿದೆ ಎಂದು ಈಗ ತಾನೆ ನೆಟ್ಟಿಗೆ ಮುರಿದು ಹೋದೆ, ಕಣೋ ! ಇರುವೆ ಗೂಡು ಕೆದಕ್ತಾ ಇದೆ ಅಂತ ಗೊತ್ತಾಗಲಿಲ್ಲ, ಮಂಕು ಮುದುಕಿ ನಾನು" ಎಂದು ರಂಗಜ್ಜಿ ತಲೆ ತಲೆ ಚಚ್ಚಿಕೊಂಡರು.

"ಯಾಕಮ್ಮಾ ? ಹಾಗೆ ವ್ಯಥೆ ಪಡ್ತಿ. ಇರುವೆಗೂಡು ಕೆದರೋದು, ಜೇನು ಗೂಡಿಗೆ ಹೊಗೆ ಇಡೋದು, ಹುತ್ತಕ್ಕೆ ಕೈ ಹಾಕೋದು. ಇವೆಲ್ಲವನ್ನೂ ಬಾಲ್ಯದಿಂದಲೇ ಕಲಿತರೆ ಮುಂದೆ ನಮ್ಮ ದೇಶದಲ್ಲಿ ದೊಡ್ಡ ಮಂತ್ರಿ ಆಗಬಹುದಮ್ಮ ! ನಮ್ಮ ಮಂತ್ರಿಗಳು ಇದೇ ಕೆಲಸದಲ್ಲಿ ನಿಪುಣರಾಗಿದ್ದಾರಮ್ಮ. ಗೋವಾ ಗೂಡು ಕೆದಕ್ತಾರೆ. ಭಾಷಾಜೇನಿಗೆ ಹೊಗೆ ಇಡ್ತಾರೆ," ಎಂದು ರಂಗಜ್ಜೀನ, ಮಗ ಸಮಾಧಾನಮಾಡಿದ.

# ವಿರಸಾಭಾಸ

ಬರೆದವರು :

**ಟಿ. ಸುನಂದಮ್ಮ**

★

"ಯಾಕೆ ಸರಸೂ ಹೀಗೆ ಕೂತಿದ್ದೀ?......ಗೊಂಬೆ ಆಟ ಆಡುಲ್ವಾ?" ಆಫೀಸಿನಿಂದ ಆಗತಾನೆ ಬಂದ ಮೈಲಾರಯ್ಯ ಕೇಳಿದ—ಕುರ್ಚಿಯಮೇಲೆ ಕೆನ್ನೆಗೆ ಕೈ ಕೊಟ್ಟು ಕೂತಿದ್ದ ಮಡದಿಯನ್ನು.

"ಅದೇನ್ರೀ ಹಾಗೆ ಕೇಳ್ತೀರಿ? ನಾನೇನು ಸಣ್ಣ ಹುಡುಗೀನೇ ಗೊಂಬೆ ಆಟ ಆಡುಕ್ಕೆ?" ಗುಡುಗಿದಳು ಸರಸು.

"ಯಾಕೆ, ಪ್ರತಿ ಮಕ್ಕಳ ಹಬ್ಬ—ಅರ್ಥಾತ್ ದಸರಾದಲ್ಲಿ ಗೊಂಬೆ ಆಟ ಆಡೋಳು ನೀನೋ, ನಿನ್ನ ಸಣ್ಣ ಮಗಳೋ?......ಇನ್ನು ಮೂರೇ ದಿನ ಉಳಿದಿದೆ, ಯಾವಾಗಲೂ ಇಷ್ಟು ಹೊತ್ತಿಗೆ ಮಣ್ಣು ಕಲ್ಲು ಹರವಿ, ರಾಗಿ ಪೈರು ಬಿತ್ತಿ, ಬಣ್ಣದ ಕಾಗದ ಸುನೇರಿ ಕತ್ತರಿಸಿ ಕೈಗೆ ಮೈಗೆ ಗೋಂದು ಬಳಕೊಂಡು ಕೂತಿರ್ತಿದ್ದೆಯಲ್ಲ—ನನಗೆ ಕಾಫಿ ಕಾಣಿಸೋದೇ ಕಷ್ಟವಾಗ್ತಿತ್ತು, ಕೃಷ್ಣಭವನದ ಕೃಷ್ಣಾಚಾರ್ರು ನನ್ನ ಕಷ್ಟ ಸುಖ ವಿಚಾರಿಸಬೇಕಾಗ್ತಿತ್ತು—ಅಂಥಾದ್ರಲ್ಲಿ ಈ ಸಾರಿ......?"

"ಬಿಡ್ರಿ ಎಂಥಾ ದಸರ! ಮಾಡಿದರೆ ಎದುರುಮನೆ ಯದುಗಿರೀ ಹಾಗೆ ಮಾಡ ಬೇಕು—ಹತ್ತು ದಿನಾನೂ ಹತ್ತು ತರಹ ವೇಷ ಹಾಕ್ತಾಳೆ."

"ಅವಳೇ ವೇಷ ಹಾಕ್ತಾಳೆಯೋ? ಮನೇ ಯಜಮಾನಿ ಪಟ್ಟಕ್ಕೆ ಕೂತರೆ ಬಂದ ಮುತ್ತೈದಮ್ಮಗಳಿಗೆ ಅರಿಶಿನ ಕುಂಕುಮ ಕೊಡೋರು ಯಾರು? ಅವರ ಮನೆ ಬೊಂಬೆಗಳೇ ಕೊಡತ್ವೇನು?"

"ಹಾಗಲ್ರೀ ನಾನು ಹೇಳಿದ್ದು. ಆಕೆ, ಹತ್ತು ದಿನಾನೂ ಹತ್ತು ಹೊಸ ಸೀರೆ ಉಡ್ತಾಳೆ; ನನಗೇನಿದೆ, ಉಟ್ಟದ್ದೇ ಬಣ್ಣ!"

"......ಅಲ್ಲ ಸರಸೂ, ಆಕೆ, ಹೇಳಿ ಕೇಳಿ ತಂಜಾವೂರು ಕುಂಭಕೋಣಂ ನಮ್ಮಪ್ಪನದೋ—ಚಿಕ್ಕನಾಯಕನಹಳ್ಳಿ! ಅಂದಮೇಲೆ......?"

ಎನ್ನುತ್ತ ಹೆಚ್ಚು ಮಾತಾಡಲಾರದ ಮೈಲಾರಯ್ಯ ಮುಖ ತೊಳೆಯಲು ಹೋದ. ಹೆಸರುಸುಂಡಿ, ಬಿಸಿ ಕಾಫಿ ಬಿದ್ದಮೇಲೆ ಬಾಯಿಗೆ ಪ್ರಾಣ ಬಂತು, ಬ್ರೇಯ್ನು ಚುರುಕಾಯ್ತು!

ಹೋಗಲೇಳು ಸರಸೂ ಈ ತುರ್ತು ಪರಿಸ್ಥಿತೀಲಿ ಬಾಂಬಿನ ಹಾವಳಿಯಲ್ಲಿ, ಬೊಂಬೆ ಇಡಲೇಬೇಡ. ಅಲ್ಲದೆ, ವೃಥಾಶ್ರಮ, ಮಾಮೂಲಿನಂತೆ—ಬಲತಾಯಿ ಬಲ

ವಂತಕ್ಕೆ ಕಾಡಿಗೆ ಹೋದ ರಾಮು, ಅವನ ಹಿಂದೆ ಕಣ್ಣು ಮುಚ್ಚಿಕೊಂಡು ಹಿಂಬಾಲಿಸಿದ ಸೀತೆ ; ಪಗಡೆ ಆಟದಲ್ಲಿ ಸೋತ ಪೆದ್ದ ಪಾಂಡವ; ಹೆಂಡತಿಯ ಸೀರೆ ಸುತ್ತಿಕೊಂಡು ಓಡಿಹೋದ ನಳ ; ಹೆಂಡತಿಯನ್ನೇ ಮರೆತ ದುಷ್ಯಂತ :—ಇವೇ ಕತೆ ತಾನೇ ನೀನಿಡೋದು ? ಅದೇ ಬೊಂಬೆಗಳನ್ನ ಬೇರೆ ಬೇರೆ ರೀತಿ ಜೋಡಿಸೋದು, ಬೇರೆ ಬೇರೆ ತಲೆ ಬರಹ ತಗುಲಿಸೋದು ! ನಿನಗೂ ಬೇಜಾರು, ನೋಡುವವರಿಗೂ ಬೇಜಾರು !"

ಮೈಲಾರಯ್ಯನ ಈ ಧೋರಣೆ ಮಾತಿಗೆ ಸರಸು ಉತ್ತರ ಕೊಡಲಿಲ್ಲ ; ಬದಲಿಗೆ ಮನಸ್ಸಿನಲ್ಲೇ ಒಂದು ನಿರ್ಧಾರಕ್ಕೆ ಬಂದಳು.

*　　*　　*　　*

ಮೂರನೇ ದಿನ, ಮೈಲಾರಯ್ಯ ಮನೆಗೆ ಬಂದಕೂಡಲೇ ಸರಸು ಅವನ ರೆಟ್ಟೆ ಹಿಡಿದು ಬೊಂಬೆರೂಮಿಗೆ ಎಳೆದೊಯ್ದು ನಿಲ್ಲಿಸಿದಳು.

ಎದುರುಗೋಡೆಗೆ "ವಿರಸಾಭಾಸ" ಎಂಬ ದಪ್ಪಕ್ಷರದ ತಲೆಬರಹ. ಕೆಳಗೆ ಸಾಲುಸಾಲಾಗಿ ಜೋಡಿಸಿದ ದ್ವಂದ್ವ ದೃಶ್ಯಗಳು !

ಮೊದಲನೆಯದಾಗಿ. ಗಾಜಿನಮನೆಯೊಂದರೊಳಗೆ ಪುಟ್ಟ ಪುಟ್ಟ ಪ್ಲಾಸ್ಟಿಕ್ ಬೊಂಬೆಗಳು ಬಿಳಿ ಪೇಪರಿನ ಟೊಪ್ಪಿಗೆ ಧರಿಸಿ, ಅದೇ ಬಣ್ಣದ ಅಂಗಿ ಧೋತ್ರ ಹಾಕಿ, ಅಂಗೈ ಅಗಲದ ದಿಂಬುಗಳನ್ನೊರಗಿ ಕೂತಿದ್ದುವು. ಅದೇ ಸಮವಸ್ತ್ರದ ಗೊಂಬೆಯೊಂದು ಪುಟಾಣಿ ಮೈಕಿನ ಮುಂದೆ ಕೈಗಳೆತ್ತಿ ನಿಂತಿತ್ತು. "ಆಹಾರದ ಮಿತಬಳಕೆ ಬಗೆಗೆ ಆಹಾರ ಮಂತ್ರಿಗಳ ಭಾಷಣ-ಕಾಂಗ್ರೆಸ್ ಅಧಿವೇಶನದಲ್ಲಿ" ಎಂದು ಚೀಟಿಯಿತ್ತು.

ಅದೇ ಗಾಜಿನ ಮನೆಯ ಹಿಂಭಾಗಕ್ಕೆ ರೊಟ್ಟಿನ ತಟ್ಟಿಯ ಮರೆಯಲ್ಲಿ ಪುಟ್ಟ ಕರಿಮರದ ಮೇಜು ಕುರ್ಚಿಗಳು. ಅದರಮೇಲೆ ತಿಂಡಿ ತುಂಬಿದ ತಟ್ಟೆಗಳು. ಸುತ್ತ ಬಿಳಿ ಟೊಪ್ಪಿಗೆಯ ಬೊಂಬೆಗಳು ಹೆಚ್ಚಾದ ತಿಂಡಿ ನೆಲದಮೇಲೆಲ್ಲ ಉರುಳಾಡುತ್ತಿದ್ದುವು !

ಮುಂದಿನ ದೃಶ್ಯ ಮಿತ ಸಂತಾನದ ಬಗೆಗೆ. ಹಿರಿ ವಯಸ್ಸಿನ ಡಾಕ್ಟರಮ್ಮ, ಅವಳ ಸುತ್ತ ಹತ್ತಾರು ಹೆಣ್ಣು ಬೊಂಬೆಗಳು. ಡಾಕ್ಟರಮ್ಮನ ಕೈಯೊಳಗೆ ಪುಟ್ಟ ಪ್ಲಾಸ್ಟಿಕ್ ಕೊಳವೆ. I. U. D ಪ್ರಯೋಗದ ಅವಶ್ಯಕತೆ ವಿಷಯವಾಗಿ ತಿಳುವಳಿಕೆ" ಎನ್ನುವುದು ಈ ದೃಶ್ಯದ ತಲೆಬರಹ.

ಮಗ್ಗುಲಲ್ಲಿ ಅದೇ ಹಿರಿವಯಸ್ಸಿನ ಡಾಕ್ಟರಮ್ಮನ ಸಂಸಾರ ಚಿತ್ರ—ಆಕೆ ಮತ್ತು ಆಕೆಯ ಹನ್ನೊಂದು ಮಕ್ಕಳದು.

ಮೂರನೇ 'ಸೀನು'—ಹೆಸರಾಂತ ಸಮಾಜಸುಧಾರಕ......ರಾಯರು ಸರಳ ಜೀವನ. ಸಹನೆ, ಕರುಣೆ ಬಗೆಗೆ ಭಾಷಣ ಬಿಗಿಯುತ್ತಿದ್ದಾರೆ. ನೂರಾರು ಸಭಿಕ ಬೊಂಬೆಗಳು ನೆರೆದು ಕೇಳುತ್ತಿವೆ,

ಮಗ್ಗುಲಲ್ಲಿ, ಅದೇ ಸಮಾಜ ಸಂಧಾರಕ...ರಾಯರ ಭವ್ಯಭವನ. ಬಾಗಿಲಲ್ಲಿ ಘೂರ್ಕ; ಗರಾಜಿನಲ್ಲಿ ಪರದೇಶದಿಂದ "ಯಡಗೈ" ವ್ಯಾಪಾರದಲ್ಲಿ ತರಿಸಿಕೊಂಡಿರುವ "ಲಿವೋಸಿನ್"; ಹೆಬ್ಬಾಗಿಲ ಒಳಿ ಕೈ ಒಡ್ಡಿ ನಿಂತಿರುವ ಭಿಕ್ಷುಕನನ್ನು ಅಲ್ಸೇಷಿಯನ್ ಅಟ್ಟಿಸುತ್ತಿದೆ!..... ರಾಯರು ನೋಡಿ ಹಿಗ್ಗುತ್ತಿದ್ದಾರೆ.

ನಾಲ್ಕನೆಯ ಜೋಡಣೆ—ಕಾವೀಧಾರೀ...ಆನಂದರ ಗೀತಾವಾಚನ. ಕಣ್ಣು ಮುಚ್ಚಿ ತನ್ಮಯರಾಗಿ, ಚಿದಾನಂದ ಸ್ವರೂಪವನ್ನೇ ಹೊಂದಿದ್ದಾರೆ; ಬದಿಯಲ್ಲಿ ಅವರಿಂದ ವಿರಚಿತವಾದ ಭಕ್ತಿಮುಕ್ತಿ ವೇದಾಂತ ಸಿದ್ಧಾಂತ ಬೋಧಕ ಪುಸ್ತಕಗಳು ಹೊರೆಹೊರೆಯಾಗಿ ಜೋಡಿಸಿವೆ.

ಜವಳೀ ದೃಶ್ಯದಲ್ಲಿ...ಆನಂದರು ಮಹಿಳಾ ವೃಂದದಿಂದ ಸುತ್ತುಗಟ್ಟಲ್ಪಟ್ಟಿದ್ದಾರೆ. ಒಬ್ಬಳ ತಲೆ ಅವರ ತೊಡೆಯಮೇಲಿದೆ. ಮತ್ತೊಬ್ಬರ ತೋಳು ಅವರನ್ನು ಬಳಸಿದೆ! ...ಆನಂದರ ಎರಡೂ ತೋಳುಗಳಂತೂ ಇಬ್ಬರು ಸುಂದರಿಯರಿಗೆ ಆಸರೆ ಕೊಟ್ಟಿವೆ!

ಬೆಕ್ಕಸಬೆರಗಾಗಿ ನೋಡುತ್ತ ಬಂದ ಮೈಲಾರಯ್ಯ. ಕಡೆಯ ಜೋಡಣೆ ಅರ್ಥ ಮಾಡಿಕೊಳ್ಳಲಾರದೆ ಹೋದ. ಶುದ್ಧ ಖಾದೀ ಸಿಲ್ಕಿನ ಸೀರೆಯುಟ್ಟು ಹೆಣ್ಣುಬೊಂಬೆ ತಲೆ ಬಾಬ್‌ಕಟ್‌ತರಹ ಬಾಚಿದೆ, ಪಕ್ಕದಲ್ಲಿ ಪುಟ್ಟ ರೇಡಿಯೋ, ಮಹಿಳೆ ಎರಡೂ ಕಿವಿಗಳನ್ನು ಕೈಯಿಂದ ಮುಚ್ಚಿಕೊಂಡಿದ್ದಾಳೆ.

"ಇದೇನು ಸರಸು? ಇವರು ಯಾರು?" "ಆವರು ಪ್ರಸಾರಶಾಖೆ ಮಂತ್ರಿಣಿ. ಆಕೆ, ಆಕಾಶವಾಣಿಯ ಕಾರ್ಯಕ್ರಮವನ್ನು ಎಂದೂ ಕೇಳುವುದಿಲ್ಲ."

ಮೈಲಾರಯ್ಯ ಸರಸುವಿನ ಚಾಲೂಕಿಗೆ ಹೊಟ್ಟೆತುಂಬ ನಕ್ಕ!

ಸರಸುವಿನ ಅತ್ತೆ—ಒಳ್ಳೆಯ ಗೊಂಬೆಗಳನ್ನೆಲ್ಲ ಹೆಣ್ಣು ಮಕ್ಕಳಿಗೆ ಕೊಟ್ಟು ಎರಡು "ನಿಲುಗೌರಿ" ಗಳನ್ನು ಸೊಸೆಗೆ ಉದಾರವಾಗಿ ಕೊಟ್ಟಿದ್ದರು. ಆ ಪೆದ್ದುಕಳೆ ಹೊತ್ತ ಗೊಂಬೆಗಳನ್ನು ಸರಸು ಬಳಸುತ್ತಲೇ ಇರಲಿಲ್ಲ. ಈ ಸಾರಿ ಅವೂ ಸಹ ಸಿಂಗರಿಸಿಕೊಂಡಿದ್ದವು.

ಹೆಣ್ಣು-ಅಂದಚಂದವಾಗಿ ಸಿಂಗರಿಸಿಕೊಂಡು ಕೈ ನೀಡಿತ್ತು. ಪೆದ್ದುಮುಖದ ಗಂಡು ಪ್ಯಾಂಟು ಬುಷ್ ಷರಟು ಧರಿಸಿ, ಕೈಯಲ್ಲಿ "ವಿಜಯಲಕ್ಷ್ಮಿ" ಸೀರೆಯ ಪೆಟ್ಟಿಗೆ ಬಿಚ್ಚಿ ಹಿಡಿದು, ಹೆಣ್ಣಿಗೆ ಕೊಡುತ್ತಿತ್ತು. ಪೆಟ್ಟಿಗೆಯೊಳಗೆ ಪೇಪರಿನ ಸೊಗಸಾದ ಸೀರೆ ಕಪ್ಪುಮಡಲಿನ ನೀಲದಂಚಿನ ಜರಿಯದು!

"ಇವರಿಬ್ಬರೂ ಯಾರು ಸರಸು?"

"ನೀವು—ನಾನು!" ಮುಸಿ ಮುಸಿ ನಕ್ಕಳು ಸರಸು.

* * * *

ಮೈಲಾರಯ್ಯ ಸಂಜೆಗೇ "ವಿಜಯಲಕ್ಷ್ಮಿ"ಯಿಂದ ಕಪ್ಪು ಮಡಲ ನೀಲದಂಚಿನ ಜರಿ ಸೀರೆ ತಂದು ಸರಸುವಿಗೆ ಕೊಟ್ಟ. ಸಮಾಜದಲ್ಲಿ ವಿರಸಾಭಾಸ ತಡೆದೀತು, ಆದರೆ ಗೃಹಕೃತ್ಯದಲ್ಲಿ ವಿರಸಾಭಾಸ ಬರಬಾರದು ಎಂದಾತನಿಗೆ ಗೊತ್ತು!

# ತುರ್ತು ಪರಿಸ್ಥಿತಿಯಲ್ಲಿ-ಕಾಗೆಗಳು

"ಒಂದೊದಗಿತು ಎಂದರೆ, ನಮ್ಮ ದೇಶದಲ್ಲಿನ ಪ್ರಜೆಗಳು ಹಾಗಿರಲಿ, ಪಕ್ಷಿಗಳು ಕೂಡ ಶಿಸ್ತು, ಸಂಯಮದಿಂದ ನಡೆದುಕೊಳ್ಳುತ್ತಿಲ್ಲಾ ?" ಅಂದ ರಾಮಚಂದ್ರಸಿಂಗ.

"ಹಾಗಂದರೇನಯ್ಯ ? ನಮ್ಮ ದೇಶದ ಪಕ್ಷಿಗಳಿಗೆ ತುರ್ತುಪರಿಸ್ಥಿತಿ ಹೇಗೆ ಗೊತ್ತಾಯಿತಯ್ಯಾ ?" ಎಂದು ಲಕ್ಷ್ಮಣರಾಯ ಕೇಳಿದ. ಅವನ ಮನಸ್ಸಿನಲ್ಲಿ ಅನುಮಾನ, ರಾಮಚಂದ್ರಸಿಂಗನಿಗೆ ತುರ್ತುಪರಿಸ್ಥಿತಿಯಿಂದಾಗಿ ಸ್ವಲ್ಪ ತಲೆ ತಳಮಳ ಗುಂಟ್ಟಿರಬಹುದು ಅಂತ.

"ತುರ್ತುಪರಿಸ್ಥಿತಿ ಪಕ್ಷಿಗಳಿಗೆ ಗೊತ್ತಾಗಿದೆಯೋ ಇಲ್ಲವೋ ತಿಳಿಯದಪ್ಪ ! ಆದರೆ ಅವತ್ತಿನಿಂದ ಅವು ಬಲು ಶಿಸ್ತಿನಿಂದ ನಡೆದುಕೊಳ್ಳುತ್ತಿವೆ" ಎಂದ ರಾಮ ಚಂದ್ರಸಿಂಗ.

"ಇನ್ನೂ ಅರ್ಥವಾಗಲಿಲ್ಲ" ಎಂದ ಲಕ್ಷ್ಮಣರಾಯ.

"ನೋಡಿಪ್ಪ ! ನಮ್ಮನೆ ಹಿತ್ತಿಲಿನಲ್ಲಿ ಎಂಜಲೆಸೆದರೆ ಕಾಗೆಗಳೆಲ್ಲಾ ಮೊದಲು ಸಂತೆ ತರಹ ಸೇರಿ ಗಲಭೆ ಮಾಡುತ್ತಿದ್ದುವು. ಈಚೀಚೆಗೆ ಎಂಜಲು ಎಸೆದರೆ ಒಂದು ಕಾಗೆ ಬಂದು ಒಂದು ಅಗಳು ಕಚ್ಚಿಕೊಂಡು ಹೋಗುತ್ತೆ. ಆಮೇಲೆ ಮರದ ಕೊಂಬೆ ಯಮೇಲೆ ಕ್ಯೂ ಕೂತಿರುವ ಕಾಗೆಗಳಲ್ಲಿ ಮೊದಲನೆಯದು ಹಾರಿ ಇಳಿದು ಬಂದು ಇನ್ನೊಂದು ಅಗುಳನ್ನೇ ಕಚ್ಚಿಕೊಂಡು ಹೋಗುತ್ತೆ. ಆಮೇಲೆ ಇನ್ನೊಂದು ಕಾಗೆ ಬಂದು......

"ಸರಿ. ಬಿಡಪ್ಪ ! ರಾಮಚಂದ್ರಸಿಂಗ ! ಒಂದೊಂದು ಕಾಗೆ ಒಂದೊಂದು ಅಗು ಳನ್ನೇ ಕಚ್ಚಿಕೊಂಡು, ಶಿಸ್ತಿನಿಂದ ಹಾರಿ ಹೋಗುತ್ತೆ. ಎಂಜಲು ಮುಗಿಯೋತನಕ" ಎಂದ ಲಕ್ಷ್ಮಣರಾಯ.

"ಅದನ್ನೇ ನಾನು ಶಿಸ್ತು ಅನ್ನೋದು. ಅಕ್ಕಿ ಅಂಗಡಿ ಎದುರಿಗೆ ನಾವು ಕ್ಯೂ ಕಾಯೋದನ್ನು ನೋಡಿದ ಕಾಗೆಗಳು, ಎಸೆದ ಎಂಜಲನ್ನು ತಿನ್ನುಕ್ಕೆ ಬಂದಾಗ ನಮ್ಮ ತರಹಾನೇ ಕ್ಯೂ ಕಾದು ಶಿಸ್ತಿನಿಂದ ನಡೆದುಕೊಳ್ಳುತ್ತವೆ. ಅವಕ್ಕೂ ತುರ್ತು ಪರಿಸ್ಥಿತಿ ಗೊತ್ತಾಗಿರಬೇಕು." ಎಂದ ರಾಮಚಂದ್ರಸಿಂಗ.

" ಆದರೆ ಮೊನ್ನೆ ಕರ್ಫ್ಯೂ ನಿಂತು ನಿಂತು, ಎರಡು ಗಂಟೆ ಆದ ಮೇಲೆ ಅಂಗಡಿ ಬಾಗಿಲು ಮುಚ್ಚಿದ್ದನ್ನು ನೋಡಿ, ಖಾಲಿ ಚೀಲವನ್ನು ಹೆಗಲಮೇಲೆ ಹಾಕಿಕೊಂಡು ಹಿಂತಿರುಗಿ ಬಂದೆನಲ್ಲಾ ! ಪಕ್ಷಿಗಳೇ ವಾಸಿ ಅಂತೀನಿ " ಎಂದ ಲಕ್ಷ್ಮಣರಾಯ.

" ಹಾಗೇನಲ್ಲ ! ನಮ್ಮನೆ ಹಿತ್ತಿಲನಲ್ಲಿ ಎಸೆದ ಎಂಜಲನ್ನು ಎಂಟೋ ಹತ್ತೋ ಕಾಗೆಗಳು ಒಂದೊಂದಾಗಿ ಬಂದು ಒಂದೊಂದು ಅಗುಳನ್ನು ಕಚ್ಚಿಕೊಂಡು ಹೋಗುತ್ತವೆ. ಆದರೆ ಮರದ ಕೊಂಬೆಮೇಲೆ ಕಾದಿರುವ ಇನ್ನೂ ಇಪ್ಪತ್ತು ಇಪ್ಪತ್ತೈದು ಕಾಗೆಗಳು, ಎಂಜಲು ಮುಗಿದು ಹೋದುದನ್ನು ನೋಡಿ, ನಿನ್ನ ತರಹಾನೇ ಖಾಲಿ ಕೊಕ್ಕಿನಲ್ಲಿ ಕಾಕಾ ಹಾಡುತ್ತಾ ಹಾರಿ ಹೋಗುತ್ತವೆ, " ಎಂದ ರಾಮಚಂದ್ರಸಿಂಗ.

" ಹಾಗಾ ನಿನ್ನ ಮಾತಿನ ಅರ್ಥ ; ನಿಮ್ಮನೇಲಿ ಶಿಸ್ತಿನಿಂದ ಊಟ ಮಾಡ್ತೀರಿ. ಎಂಜಲೆಸೆದರೆ ಏಳೋ ಎಂಟೋ ಅಗುಳುಗಳಿರುತ್ತವೆ. ಅಷ್ಟು ಜಾಣರು ನೀವು. ತುರ್ತುಪರಿಸ್ಥಿತಿಯಲ್ಲಿ ಆಹಾರವನ್ನು ಬಲು ಹುಷಾರಾಗಿ ಉಪಯೋಗಿಸ್ತೀವಿ, ಅಂತ ಜಂಭ ಕೊಚ್ಚಿಕೊಳ್ಳುಕ್ಕೆ ಈ ಸಬೂಬು ತೆಗೆದೆಯಾ !" ಎಂದು ಉದ್ಗರಿಸಿದ ಲಕ್ಷ್ಮಣರಾಯ.

" ಜಂಭ ಕೊಚ್ಚಿಕೊಳ್ಳುಕ್ಕೆ ಯಾರೂ ಮಾಡದ್ದನ್ನು ನಾವೇನೂ ಮಾಡಲಿಲ್ಲ ವಲ್ಲ ! ದೇಶದಲ್ಲಿ ಎಲ್ಲರೂ ಮಾಡೋದನ್ನೇ ನಾವೂ ಮಾಡಿದ್ದೇವೆ. ಅದಕ್ಕೋಸ್ಕರ ಹೇಳಿಲ್ಲವಲ್ಲ " ಎಂದ ರಾಮಚಂದ್ರಸಿಂಗ.

" ಮತ್ತೆ ಯಾಕೆ ಆ ಮಾತು ಎತ್ತಿದೆ ? " ಎಂದು ಲಕ್ಷ್ಮಣರಾಯ ಕೇಳಿದ.

" ಪಾಪ, ಆ ಕಾಗೆಗಳು ಇಷ್ಟು ಶಿಸ್ತು, ಬಾಳನ್ನು ತುರ್ತು ಪರಿಸ್ಥಿತಿಯಲ್ಲಿ ನಡೆಸುತ್ತಿವೆಯಲ್ಲ ! ಎಂದಾದರೂ ಇವಕ್ಕೆ ಹಬ್ಬದೂಟ ಮಾಡಿಸಬೇಕು ಅನ್ನಿಸಿತು " ಎಂದ ರಾಮಚಂದ್ರಸಿಂಗ.

" ಅದು ಮಾತ್ರ ಸುಲಭಾಪ್ಪ. ಪಾಕೀಸ್ಥಾನಕ್ಕೆ ಪಿಂಡ ಇಡ್ತೀವಲ್ಲ! ಆಗ ದೊಡ್ಡ ಪಿಂಡ ಇಡೋಣ. ಕಾಗೆಗಳೆಲ್ಲಾ ಹೊಟ್ಟೆತುಂಬ ತಿನ್ನಲಿ " ಎಂದ ಲಕ್ಷ್ಮಣರಾಯ.

" ಆಗ ಹಬ್ಬ ಮಾಡಿದ ಹಾಗೇ ಆಯಿತು." ಎಂದು ರಾಮಚಂದ್ರಸಿಂಗ ಒಪ್ಪಿದ.

—ಬಚ್ಚ

---

ಎಲೆ ಭಂಟಿಪ್ಪಾ ! ರೋಷಿನಿಂದಲೇ
ಚೀಣೀ ಜಾತಿಗೆ ಸೇರ್ದೆನೆಂದು ಗರ್ವಿಸಬೇಡ !
ಮೋಸವು ಅಷ್ಟೆಲ್ಲಿಹುದು ? ಭಿಕ್ಷೆಯ
ಬೇಡುವುದರೊಳಾಯ್ತು ನಿನ್ನಯ ಶೌರ್ಯಂ ।

# ಎಂಥಾ-ಸಿಸ್ಟರಪಾ

" ಎಂಥಾ ಸಿಸ್ಟರ್ ಗೊತ್ತಾ ?" ಅಂದ ನಾಣಿ ರಸ್ತೇಲಿ ಹೋಗ್ತಾ. ಎಲ್ಲೋ ಯೋಚ್ನೇ ಮಾಡ್ತಿದ್ದ ಸುಂದ್ರು " ಯಾರ ಸಿಸ್ಟರ್ ಅಪಾ?" ಅಂದ.

ಅದೇ ಕಣೋ ಆ ಡೊಳ್ಳ್ಹೊಟ್ಟೆ ಮರಿ......ಅಂತ ಮಾತು ಮುಂದುವರಿಸು ವುದಕ್ಕೆ ಮುಂಚೇನೇ ಸುಂದ್ರು ರೈಲ್‌ಬಿಟ್ಟ:—" ಅವನ ಸಿಸ್ಟರ‍್ರಾ. ನಿಜವಾಗಲೂ ಸುಂದ್ರಿ ಕಣೋ. ಬ್ರಹ್ಮ ಏನಾದ್ರೂ ವೈಜಯಂತಿಮಾಲಾ, ಕ್ರಿಸ್ಟಿಯನ್ ಕೀಲರ್, ಮೀನಾಕುಮಾರಿ, ಮಾಲಾಸಿಂಹ, ನಂದಾ ಇವರನ್ನೆಲ್ಲಾ ಸೇರಿಸಿ ಒಬ್ಬಳನ್ನು ತಯಾರಿಸಿ ಭೂಮಿಗೆ " ಭೂ " ಬಿಟ್ಟಿಸ್ಟು ಚೆನ್ನಾಗಿದ್ದಾಳೆ. ಆಹ, ಆಹ ಏನು ಹಾಡ್ತೇಳ್ತಾಳೆ. ಕೋಗಿಲೆಕಂಠ, ಚಿಗರಿ ನಯನ, ಗಜಗಮನೆ, ಸಿಂಹಕಟಿ, ದಾಳಿಂಬ್ರೇದೆ ಹಲ್ಲು, ತೊಂಡೆ ಹಣ್ಣಿಂದೇ ತುಟಿ, ಚಂದ್ರು ಬ (ವ) ದನೆ, ಟೆರಿಲೆಕ್ಸ್ ಉಡುಪು, ಬಾಳೇ ಕಂಬದಂತಹ ........." ಅಂತ ಬ್ರೇಕಿಲ್ಲದೇ ಮುಂದುವರೀತಿದ್ದ. ಅಷ್ಟರಲ್ಲೇ ನಾನೂ ನಾಣೀ ಅವನಿಗೆ ಬ್ರೇಕ್ ಹಾಕಿ ಪಕಪಕಾಂತ ನಕ್ಕೆವು. ಸುಂದ್ರುನ ಮೋರೆ ಪೆಚ್ಚಾಯ್ತು.

" ನಾವು ಮಾತಾಡ್ತಿದ್ದದ್ದು ಏನು ಗೊತ್ತಾ ?" ಅಂದಿವಿ ಸುಂದ್ರುಂಗೆ.

" ಗೊತ್ತು ಗೊತ್ತೂ ಆ ಡೊಳ್ಳೊಟ್ಟೆಮರಿ ಸಿಸ್ಟರ್ ವಿಷಯ ತಾನೇ" ಅಂದ ಸುಂದ್ರು.

" ಎಲಾ ಮಂಗನೇ, ಹೀಗೇ ಹೇಳ್ತಾ ಅವರಪ್ಪನ ಕೈಲಿ " ಫ್ಲರ್ಟ್ " ಅಂತ ಕಪಾಳಿಸಿಕೊಂಡು ಕಟ್ಟಿಸ್ಕೊಂಡ ಹಲ್ಲನ್ನೆಲ್ಲಾ ಉದುರಿಸ್ಕೊಂಡೀಯಾ, ನಾವ್ಹೇಳಿದ್ದು, ನಾವ್ಹೇಳಿದ್ದೂ ಯಾವ ಸಿಸ್ಟರ್ ಅಂದ್ರೆ. ಅಂದ್ರೆ, ಅಂದ್ರೆ—ಟ್ರಾನ್-ಸಿಸ್ಟರ್ ಗೊತ್ತಾಯ್ತಾ" ಅಂತ ನಾನೂ ನಾಣಿ ಸ್ವರಗೂಡಿಸಿದೆವು.

—ಹಾ. ನ್ಯೈ. ಸೂರಿ

# ಕುದುರೆ ನೋಡಿ ಹುರುಳಿ ತರಬೇಕು

ಜಟ್ಕಾ ನೋಡುಕ್ಕೆ ಚೆನ್ನಾಗಿತ್ತು. ಹಾರುವ ಹುಲಿಯ ಬೊಂಬೆಯನ್ನ ಎರಡೂ ಪಕ್ಕಗಳಲ್ಲಿ ಬರೆಸಿದ್ದ, ಅಯೂಬ್‌ಸಾಬಿ. ಕುದುರೆಯನ್ನೂ ಚೆನ್ನಾಗಿ ಮಾಲೀಷ್‌ಮಾಡಿ, ಅದರ ಮುಂದಲೆಗೆ ಜಡೆಹಾಕಿ, ಹೂವು ಮುಡಿಸಿದ್ದ. ಮೆತ್ತನೇ ಹುಲ್ಲು ಹಾಕಿ ಅದರ ಮೇಲೆ ಜಮಖಾನ ಹಾಸಿ, ಕೂತುಕೊಳ್ಳುವವರಿಗೆ ಸೌಕರ್ಯ ಮಾಡಿಕೊಟ್ಟಿದ್ದ. ಪ್ರಯಾಣ ಆದಮೇಲೆ ಬಾಡಿಗೆಗೆ ತಕರಾರು ಹೂಡುತ್ತಿದ್ದರೂ, ಏನೋ ಇಷ್ಟೋ ಅಷ್ಟೋ ಹೆಚ್ಚು ಕೊಟ್ಟರೆ, ಹೊರಟುಹೋಗುತ್ತಿದ್ದ. ಒಂದು ತರಹ ಚೆನ್ನಾಗಿಯೇ ಇತ್ತು.

ಅವನ ಜಟ್ಕಾದಲ್ಲಿ ಕೂತುಹೋದರೆ, ಅಪಾಯ ಸಂಭವಿಸುತ್ತೆ ಎನ್ನುವ ಹೆದರಿಕೆ ಇರಲಿಲ್ಲ. ಕಾವೇರಿ ನೀರು ಕುಡಿದು, ಕಡಕೊಳದ ಕಡಳೆ, ಹುರುಳಿ, ತಿಂದು, ಜಟ್ಕಾಕುದುರೆ ಮೆರವಣಿಗೆ ತರಹವೇ ಓಡುತ್ತಿತ್ತು, ಜೋರು ಓಡಾಟದ ರಭಸವೆಲ್ಲಾ, ಜಟ್ಕಾ ಬಂಡಿಯ ಎರಡೂ ಪಕ್ಕಗಳಲ್ಲಿದ್ದ, ಬೊಂಬೆ ಹುಲಿಗಳದ್ದೇ! ಪ್ರಯಾಣ ಸುರಕ್ಷಿತವಾಗಿತ್ತು.

ಯಾರೋ ಹೇಳಿದರು ಅಯೂಬ್‌ಸಾಬಿಗೆ "ಕಡಕೊಳದ ಕಡಳೆ ಕುದುರೇಗೆ ಸಾಲದು: ಚೀಣೀ ಹುರುಳಿ ಈಗ ಅಗ್ಗವಾಗಿ ಸಿಕ್ಕುತ್ತೆ. ಅದನ್ನ ಕೊಂಡು, ಕುದುರೆಗೆ ಹಾಕು. ಜಟ್ ವಿಮಾನದ ತರಹ ನಿನ್ನ ಜಟ್ಕಾನೇ ಓಡಿಸುತ್ತೆ" ಅಂತ. "ಚಲ್! ಬೇಟಾ!" ಅಂತ ಕೂಗುತ್ತಾ, ಗಾಡಿ ಚಕ್ರಕ್ಕೆ ಚಾವಟಿ ಹಿಡಿ ತಡವರಿಸಿ ಕಟ ಕಟ ಡೋಲು ಬಾರಿಸುತ್ತ ಹೋಗುತ್ತಿದ್ದ ಅಯೂಬನಿಗೆ ಆಸೆ ಆಯಿತು. ಜೂಜು ಕುದುರೆ ತರಹ ತನ್ನ ಕುದುರೆ ಓಡಿದರೆ, ಉಚ್ಚೈಶ್ರವಸ್ಸಿನ ಮೇಲೆ ಕುಳಿತ ದೇವೇಂದ್ರನಂತೆ ತಾನು ಶೋಭಿಸಬಹುದು, ಎಂದು ಹಗಲುಗನಸು ಕಂಡ.

"ಚೀಣಿಯರು ತಮ್ಮ ಹೆಬ್ಬಾವಿಗೂ ಕೂಡ ಹುರಳಿ ತಿನ್ನಿಸುತ್ತಾರೆ. ಅದಕ್ಕೇ ಆ ಹೆಬ್ಬಾವು ಯಾವ ಕಾಡಿನಲ್ಲಾದರೂ, ಹೆದರಿಕೆ ಇಲ್ಲದೆ ಹರಿದಾಡುತ್ತೆ." ಎಂದು ಅಯೂಬ್‌ಸಾಬಿಗೆ ಹೇಳಿದರು. ಮೊದಲೇ ಹಗಲುಗನಸು ಕಾಣುತ್ತಿದ್ದ ಅಯೂಬ್ ಸಾಬಿಗೆ ಹೆಂಡ ಕುಡಿಸಿದಂತಾಯಿತು.

ನೆಟ್ಟಗೆ ಮಾರುಕಟ್ಟೆಗೆ ಹೋದ. ಚೀನಿ ಹುರುಳಿ ಎಲ್ಲಿ ಸಿಗುತ್ತೆ ಅಂತ ಕೇಳಿದ. ಚೀನಿ ಹುರುಳಿ ಎನ್ನುತ್ತಿದ್ದ ಹಾಗೆಯೇ ನಾಕಾರು ಜನ ಬಂದು ಅಯೂಬ್ ಸಾಬೀನ ಮುತ್ತಿದರು. ನಮ್ಮ ಗಡಂಗಿನಲ್ಲಿದೆ ಬಲು ಅಗ್ಗವಾಗಿ ದೊರಕುತ್ತದೆ. ಬಾ ಬಾ ಅಂತ ಹೂವಿನಹಾರ ಹಾಕಿ ಕರಕೊಂಡು ಹೋದರು. ಇಲ್ಲಿ ಪಲಾವ್ ತಿನ್ನಿಸಿದರು. ಕೊಳದಲ್ಲಿ ಕ್ರೀಡಿಸುತ್ತಿದ್ದ 'ಹೂರೆ' ಯರ ಚಿತ್ರಪ್ರದರ್ಶನ ತೋರಿಸಿದರು, ಈ ಹುರುಳೀನ ನಿನ್ನ ಕುದುರೆಗೆ ತಿನ್ನಿಸು, ಆಮೇಲೆ ನೋಡು ನಿನ್ನ ಜಟ್ಕಾ ಹಾರೋ ಪ್ಲೇನ್ ತರಹ ಹಾರುತ್ತೆ ಅಂತ ಪುಸಲಾಯಿಸಿದರು. ಬೇಕಾದರೆ ಸಾಲ ಕೊಡ್ತೀವಿ. ತೊಗೋ ಅಂದರು.

ಬಲು ಖುಷಿಯಾಯಿತು ಅಯೂಬ್ ಸಾಬಿಗೆ. ಚೀನಿ ಹುರುಳಿ ತಿನ್ನಿಸಿ ಕುದುರೇನ, ತನ್ನ ಜಟ್ಕಾಕ್ಕೆ ಕಟ್ಟಿ, ಚಲ್ ಬೇಟಾ ಅಂತ ಮುದ್ದುಮಾತಾಡುತ್ತ ಕುದುರೇನ ಹುರಿದುಂಬಿಸಿದರೆ ಊರಿಂದ ಊರಿಗೆ ಹಾರುತ್ತೆ. ಆಗ ದೊಡ್ಡ ಗಿರಾಕಿ ಸಿಗುತ್ತೆ. ಬರೀ ಊರಿನಲ್ಲಿ ಬಾಡಿಗೆಗೆ ಹೊಡಿಯೋದು ಸುಖವಿಲ್ಲ. ಚಿಲ್ಲರೆಪಲ್ಲರೆ ಸಂಪಾದನೆ ಸಿಗುತ್ತೆ. ಆದರೆ ಊರಿಂದೂರಿಗೆ ಗಾಡಿ ಹೊಡೆದರೆ ಕಿಸೆ ತುಂಬಾ ಕಾಸು ಬೀಳುತ್ತೆ, ಆಗ ಮೋಜು ಮಾಡಬಹುದು ಎಂದುಕೊಂಡ.

ಹುರುಳಿ ಚೀಲಾನ ಹೊತ್ತುಕೊಂಡು ಅಯೂಬ್‌ಸಾಬಿ ಮನೆಗೆ ಬಂದ. ಹೆಂಡತಿ ಕೇಳಿದಳು, ಏನೂ ಅಂದ್ರೆ ಇದು ಅಂತ. ಹೀಗೆ ಹೀಗೆ, ಚೀನೀ ಹುರುಳಿ ತಿನ್ನಿಸಿದರೆ ನಮ್ಮ ಜಟ್ಕಾ ಕುದುರೇಗೆ ಕುಮ್ಮಕ್ಕು ಕೊಟ್ಟಹಾಗಾಗುತ್ತೆ. ಆಗ ಅದು ವೇಗವಾಗಿ ಹಾರುತ್ತೆ. ಊರಿಂದೂರಿಗೆ ಹೋಗಬಹುದು, ಹೆಚ್ಚು ಬಾಡಿಗೆ ಸಿಗುತ್ತೆ. ಆ ಮೇಲೆ ದಿನಾಗಲೂ ಬಿರಿಯಾನಿ ತಿನ್ನಬಹುದು ಎಂದೆಲ್ಲಾ ಜಂಭ ಕೊಚ್ಚಿಕೊಂಡ. "ಈ ದುರಾಶೆ ಎಲ್ಲಾ ಬೇಡ, ಅಂದ್ರೆ. ಈಗ ಹೇಗೂ ಸುಖವಾಗಿದೀವಿ. ಊರಿಂದೂರಿಗೆ ಯಾಕಾರೂ ಹೋಗಬೇಕು ?" ಎಂದು ಹೆಂಡತಿ ಇನ್ನಿಲ್ಲದ ಹಾಗೆ ಹೇಳಿದಳು. "ಹೆಂಗಸಿಗ್ಯಾಕೆ ದಂಡಿನ ದುಃಖ! ಹೇಳಿದ ಹಾಗೆ ಕೇಳಿಕೊಂಡಿರು. ಈ ಮಾತಿಗೆಲ್ಲಾ ಬರಬೇಡ. ಇಲ್ಲದೆ ಇದ್ದರೆ ತಲಕ್ ತಲಕ್ ಮಾಡಿ ನಿನ್ನ ಬಿಟ್ಟುಬಿಡ್ತೀನಿ" ಅಂತ ಹೆದರಿಸಿದ.

ಕುದುರೇಗೆ ಚೀನೀ ಹುರುಳೀನ ತಾನೇ ಬೇಯಿಸಿ ತಿನ್ನಿಸಲು ಶುರುಮಾಡಿದ. ಗುಡು ಗುಡು ಅಂತ ಶಬ್ದ ಆಯಿತು, ಕುದುರೆ ಲಾಯದಲ್ಲಿ. ಅಯೂಬ್ ಸಾಬಿ ಹೋಗಿ ನೋಡ್ತಾನೆ! ಕುದುರೆ ನಾಲ್ಕುಗಾಲುಗಳನ್ನು ಛಡಪಡಿಸುತ್ತಿತ್ತು. ಓಹೋ ಕುದುರೇಗೆ ಶಕ್ತಿಬಂದಿದೆ. ಈಗ ಊರಿಂದೂರಿಗೆ ಓಡುತ್ತೆ ಎಂದುಕೊಂಡ ಅಯೂಬ್ ಸಾಬಿ. ಪಾಪ! ಕುದುರೆ ಹೊಟ್ಟೇಲಿ ಗುಡು ಗುಡು ಆಯ್ತು ಅಂತ ಅವನಿಗೆ ತಿಳಿಯಲಿಲ್ಲ.

ಮಾರನೆ ದಿನ ಜಟ್ಕಾಕ್ಕೆ ಕುದುರೇನ ಕಟ್ಟಿದ. ಚಲ್ ಬೇಟಾ ಅಂತ ಅದರ ಬೆನ್ನು ತೊಡೆ ತಡವಿ ಹುರಿದುಂಬಿಸಿದ. ಪಾಪ! ಆ ಕುದುರೆಗೋ ಚೀನೀ ಹುರುಳಿ ತಿಂದು ಹೊಟ್ಟೆ ಕಿವಿಚುತ್ತಿತ್ತು. ಅದರ ಜತೆಗೆ ಗಾಡಿ ಬೇರೆ ಕಟ್ಟಿದ್ದರು. ಅದಕ್ಕೆ ಕೋಪ ಬಂತು. ಹೊಟ್ಟೆನೋವು, ಮನಸ್ಸಿನ ತಾಪ ಎರಡೂ ಸೇರಿ ಕುದುರೆಯನ್ನು ಕೆರಳಿಸಿದುವು. ಕುದುರೆ ಛಂಗಂತ ಹಾರುಕ್ಕೆ ಹೊರಟಿತು. ಹಠಾತ್ತನೆ ಅದು ಹಾರಿದ ಕಾರಣ, ಗಾಡಿಗೆ ಕಟ್ಟಿದ್ದ ಕಟ್ಟು ಹರಿದುಹೋಯಿತು. ಕುದುರೆ ಮುಂದಕ್ಕೆ ಓಡಿ ಹೋಯಿತು. ಹಿಂದಕ್ಕೆ ಗಾಡಿ ರೋಕರ್ ಹೊಡೆದು ಮುರಿದುಹೋಯ್ತು. ಕೆಳಗೆ ಬಿದ್ದ ಅಯೂಬ್ ಸಾಬಿ ತಡವರಿಸಿಕೊಂಡು ಎದ್ದ. ಕುದುರೆ ಎಲ್ಲಿಗೆ ಓಡಿಹೋಯ್ತೋ ಎಂದು ಅದನ್ನು ಹುಡುಕಿಕೊಂಡು ಹೊರಟ.

ಸ್ವಲ್ಪ ದೂರದಲ್ಲೇ ಕುದುರೆ ಬಿದ್ದಿತ್ತು. ಹತ್ತಿರ ಹೋಗಿ ನೋಡಿದ. ಸತ್ತು ಹೋಗಿತ್ತು. ಹೊಟ್ಟೆ ಉಬ್ಬರಿಸಿಕೊಂಡಿತ್ತು. ಚೀನೀ ಹುರುಳಿ ಪರಿಣಾಮ ಶೂಲೆ ಯಲ್ಲಿ ಪರಿಣಮಿಸಿತ್ತು.

ಜೋಲು ಮುಖ ಹಾಕಿಕೊಂಡು ಹಿಂತಿರುಗಿದ ಅಯೂಬ್‌ಸಾಬಿ. "ನಾನು ಹೇಳಲಿಲ್ಲವೇ, ಅಂದ್ರೆ. ಕಂಡುಕಂಡೋರು ಹೇಳಿದರು ಅಂತ, ಏನೇನನ್ನೋ ನಮ್ಮೂರು ಕುದುರೆಗೆ ತಿನ್ನಿಸಿದರೆ, ಅಪಾಯ ಆಗದೆ ಇರುತ್ಯೇ? ಹಾಗೆ ಅಪಾಯ ಆದಾಗ, ಇದ್ದ ಗಾಡೀನೂ ಮುರಿದುಬೀಳುತ್ತೆ! ಈಗ ಹೊಟ್ಟೆಪಾಡಿಗೆ ಏನು ಮಾಡೋದು ಅಂದ್ರೆ. ನೆರೆಹೊರೆಯವರ ಹತ್ತಿರ ಭಿಕ್ಷೆಬೇಡೋ ಹಾಗೆ ಆಯಿತಲ್ಲ ಅಂದ್ರೆ!" ಅಂತ ಹೆಂಡತಿ ಲಬೋಲಬೋ ಮಾಡಿದಳು.

ಗಾಡಿ ನೋಡಿ ಕುದುರೆ ಕಟ್ಟಬೇಕು ಅಂದ್ರೆ. ಕುದುರೆ ನೋಡಿ ಹೊಟ್ಟೆಗೆ ಹಾಕಬೇಕು, ಇನ್ನುಮೇಲೆ ಎಂದು ಹೇಳಿದಳು.

ಕೆಟ್ಟ ಮೇಲೆ ಅಯೂಬ್ ಸಾಬಿಗೆ ಬುದ್ಧಿ ಬಂತು.

—ಕುಮಾರ್.

---

ಥಳಥಳಿಸುವೆಯಾ ಹಿರಿ ಪ್ಯಾಟನ್ನೇ!
ಗಡುಸಿನ ಒಡಲು ನನೆದೆಂದೆನುತ
ಥಳಿಸುತ ನಿನ್ನನು, ಒಡಲನು ಸಿಡಿಸಿ
ಕರುಳನ ಬಗೆದು, ನೋಡುವೆವು.

# ಕೆಲವು ರಹಸ್ಯಗಳು

"ಭೀಕರ ರೂಪಿನ ಕೋಣ, ಅದಕ್ಕೂ ಭೀಕರ ರೂಪು ನನ್ನದು, ಇವನ್ನು ಕಂಡು ಹೆದರಿಕೆ ಆಗಲಿಲ್ಲವೇ, ಸಾವಿತ್ರಿ," ಎಂದು ಕೋಣವಾಹನ ಯಮ ಕೇಳಿದನಂತೆ.

" ಅತ್ತೆ ಅತ್ತಿಗೆಯರ ಆರ್ಭಟಕ್ಕೆ ಬೆದರಲಿಲ್ಲ ನಾನು. ಈ ದೃಶ್ಯಕ್ಕೆ ಬೆದರಲೇ? " ಎಂದು ಸಾವಿತ್ರಿ ಹೇಳಿದಳಂತೆ.

" ಭೇಷ್ ಅಂತ ಹೇಳಿ ಮೂರನೆಯ ವರವನ್ನು ಯಮ ಕೊಟ್ಟನಂತೆ.

* * * *

ಹೆಂಡತಿಯ ಹಾವಭಾವಗಳಿಂದ ಸ್ಫೂರ್ತಿ ಪಡೆದು ಜಕಣಾಚಾರಿ ಅಮರ ಶಿಲ್ಪಗಳನ್ನು ರಚಿಸಿದ ಎಂದು ಪ್ರತೀತಿ.

—ಅಡಿಗೆಯ ಸೌಟು ಹಿಡಿದ ಹೆಣ್ಣು ವಿಗ್ರಹವನ್ನು ಜಕಣಾಚಾರಿ ರಚಿಸಿಲ್ಲವಾದ್ದರಿಂದ, ಪ್ರಾಯಶಃ ಆತನೇ ಅಡಿಗೆ ಮಾಡುತ್ತಿದ್ದಿರಬೇಕು !

* * * *

ಪಾಕಶಾಸ್ತ್ರವಿಶಾರದ, ತೇಜೀಶಾಸ್ತ್ರನಿಪುಣ. ಎಂದು ಹೆಸರು ಪಡೆದಿದ್ದರಿಂದಲೇ ನಳನನ್ನು, ದಮಯಂತಿ ಕಷ್ಟಪಟ್ಟು ಮದುವೆಯಾದಳು. ರುಚಿರುಚಿಯಾದ ತಿಂಡಿ ಮಾಡುತ್ತಾನೆ, ಹೊಸ ಜಟ್ಕಾದಲ್ಲಿ ಸಿನೀಮಾಕ್ಕೆ ಕರಕೊಂಡು ಹೋಗ್ತಾನೆ ಎಂಬ ಆಸೆಯಿಂದ.

* * * *

ಇಬ್ಬರು ಹೆಂಡಿರ ಕಾಟವನ್ನು ತಡೆಯಲಾರದೆ ಈಶ್ವರ ವಿಷಕಂಠನಾದ ಎಂದೆನ್ನಬಾರದು.

* * * *

ಹದಿನೆಂಟು ದಿನಗಳ ಕಾಲ ಗೀತೆಯನ್ನು ಶ್ರೀ ಕೃಷ್ಣಪರಮಾತ್ಮ ಅರ್ಜುನನಿಗೆ ರಣರಂಗದಲ್ಲಿ ಬೋಧಿಸಿದನಲ್ಲ—

—ಆಗ ಕೌರವರು ಕಡಲೇಕಾಯಿ ಬಿಡಿಸಿಕೊಂಡು ತಿನ್ನುತ್ತಿದ್ದರಂತೆ.

* * * *

ದೇವಕಿಯ ಎಂಟೂ ಮಕ್ಕಳನ್ನೂ ಕಂಸ ಕೊಂದಿದ್ದಕ್ಕೆ ಕಾರಣ

—ಇವನ್ನೆಲ್ಲಾ ನಾನೇ ಓದಿಸಿ, ಮದುವೆ ಮಾಡಬೇಕಲ್ಲ ಎಂಬ ಬೇಸರದಿಂದ.

* * * *

—ಆನಂದ

# ಹೆಂಡತಿಯ ಕಾತರ!

" ಡಾಕ್ಟರನ್ನು ಕಳಿಸಿಕೊಟ್ಟು ಬೇಗ ಬಂದುಬಿಡ್ತೀನಿ, ಅಂದ್ರೆ " ಅಂತ ರೋಗಿಗೆ ಹೇಳಿ, ಮೀನಾಕ್ಷಮ್ಮನವರು ಕೊಠಡಿಯ ಹೊರಬಿದ್ದರು. ವರಾಂಡದಲ್ಲಿ ಡಾಕ್ಟರು ನಿಂತು " ಇನ್ನೇನೂ ಹೆದರಿಕೆ ಇಲ್ಲಮ್ಮಾ! ಯಾವ ತೊಡರೂ ಕಾಣಿಸಿಕೊಂಡಿಲ್ಲ. ಜ್ವರ ನಿಂತು ಮೂರು ದಿನಗಳಾದುವು. ಶ್ವಾಸಕೋಶಗಳು ಶುದ್ಧವಾಗಿವೆ. ಕಫ ಏನೂ ಕಟ್ಟಿಕೊಂಡಿಲ್ಲ. ಹಸಿವೂ ಹುಟ್ಟಿದೆ. ಅಂದಮೇಲೆ ಧಾರಾಳವಾಗಿ ಆಹಾರ ವನ್ನು ಕೊಡಿ. ಶಕ್ತಿ ತುಂಬಿಬರುತ್ತೆ " ಎಂದು ರೋಗಿಯ ಸ್ಥಿತಿಯ ವಿಷಯವನ್ನು ತಿಳಿಸಿದರು.

ಮೀನಾಕ್ಷಮ್ಮನವರಿಗೆ ಸಂತೋಷವಾಯಿತು ಅಂತ ಹೇಳಬೇಕೇ ? ಅವರು ಹಿಗ್ಗಿದ್ದನ್ನು ವರ್ಣಿಸಬೇಕೇ ? " ಎಲ್ಲಾ ನಿಮ್ಮ ಹಸ್ತಗುಣದ ಪ್ರಭಾವ, ಡಾಕ್ಟರೇ ! ಇನ್ನು ನಾಲ್ಕು ದಿನಕ್ಕೆ ಗೌರಿಹಬ್ಬ ಬರುತ್ತೆ. ಯಜಮಾನರು ಎದ್ದು ಕೂತು ಕೊಂಡರು ಎಂದರೆ ಒಳ್ಳೆ ಮನಸ್ಸಿನಿಂದ ಪೂಜೆಮಾಡಬಹುದು " ಎಂದು ಧನ್ಯವಾದ ಗಳನ್ನು ಅರ್ಪಿಸಿದರು ಡಾಕ್ಟರು ಹೋಗಿ ತಮ್ಮ ಮೋಟಾರಿನಲ್ಲಿ ಕುಳಿತಿದ್ದೇ ತಡ ! ಮೀನಾಕ್ಷಮ್ಮನವರು ಯಜಮಾನರ ಕೋಣೆಯತ್ತ ದಡಬಡ ಓಡಿದರು. " ಖಾಯಿಲೆ ಗುಣವಾಗಿದೆಯಂತೆ ಅಂದ್ರೆ. ಡಾಕ್ಟರು ಹೇಳಿದರು " ಎಂದು ನೇಲುಸಿರುಬಿಡುತ್ತ ಹೇಳಿದರು. " ನನಗೂ ಹಾಗೇ ಅನ್ನಿಸಿತ್ತು ಹಸಿವು ಹುಟ್ಟಿದೆ, ಒಂದಿಷ್ಟು ಸಾರು ಅನ್ನ ಬಿಸಿಬಿಸಿಯಾಗಿ, ಸ್ವಲ್ಪ ನಿಂಬೆಹಣ್ಣಿನ ರಸ ಹಾಕಿ, ಹುಳಿ ಮುಂದುಮಾಡಿ ಕೊಡೇ, ಅಂತ ಕೇಳಲಿಲ್ಲವೇ ? ಆದಕ್ಕೆ ಉತ್ತರ ಅಂತ ಒಂದು ಬಟ್ಟಲು ಗಂಜಿ ತಂದುಕೊಡಲಿಲ್ಲವೇ ? ಅದನ್ನು ಹಾಗೇ ಬೋಗುಣಿಗೆ ಚೆಲ್ಲಲಿಲ್ಲವೇ " ಎಂದು ಯಜ ಮಾನರು ಅಂದರು, " ಬೇಕು ಬೇಕು ಅಂತ ಗಂಜಿ ಕೊಟ್ಟೆನೇ ? ನಿಮ್ಮ ಒಳ್ಳೆಯ ದಕ್ಕೇ ಅಲ್ಲವೇ ? ಈಗ ಬೇಕಾದರೆ ಸಾರು ಅನ್ನ ಮಾಡಿ ತರ್ತೀನಿ ಅಂದ್ರೆ " ಎಂದರು. ಮೀನಾಕ್ಷಮ್ಮನವರು. ಈಗ ಮಧ್ಯಾಹ್ನ ನಾಲ್ಕು ಗಂಟೆ ಆಯಿತು. ರಾತ್ರಿ ಕೊಟ್ಟರೆ ಸಾಕು " ಎಂದರು ಯಜಮಾನರು. " ಹಾಗಾದರೆ ದೇವರ ಮನೆಗೆ ಹೋಗಿ ಬರ್ತೀನಿ ಅಂದ್ರೆ" ಎಂದು ಮೀನಾಕ್ಷಮ್ಮನವರು ಹೇಳಿ ಕೊಠಡಿಯಿಂದ ಹೊರಬಂದರು.

ಯಜಮಾನರ ಮನಸ್ಸು ಚುರಚುರ ಅನ್ನುತ್ತಿತ್ತು. " ನನ್ನ ಖಾಯಿಲೆ ವಾಸಿ ಯಾಗಲಿ ಅಂತ ತನಗೆ ತಿಳಿದ ಪಥ್ಯಮಾಡಿದಳು. ಅಷ್ಟಕ್ಕೆ ರೇಗಿ ತಂದಿದ್ದ ಗಂಜಿ ಯನ್ನು ಬೋಗುಣಿಗೆ ಸುರಿದೆ. ಡಾಕ್ಟರು ಬಂದು ಪರೀಕ್ಷೆ ಮಾಡಿ ಗುಣಮುಖ ವಾಗಿದೆ ಎಂದ ಮೇಲೆ ಅನ್ನ ಸಾರು ಮಾಡಿ ತರ್ತಾಳೆ. ಗುಣಮುಖವಾಯ್ತು ಅಂತ ತಿಳಿದ ಕೂಡಲೆ, ಪಾಪ ! ದೇವರ ಮನೆಗೆ ಹೋಗಿ ಬರ್ತೀನಿ ಅಂದಳು. ಗುಣಮುಖ ವಾಯ್ತಲ್ಲಾ ಅಂತ ದೇವರ ಎದುರಿಗೆ ತುಪ್ಪದ ದೀಪ ಹಚ್ಚಿ ಬರ್ತಾಳೆ ಅಂತ

ಕಾಣುತ್ತೆ. ಅನ್ಯಾಯವಾಗಿ ಆಕೆ ಮನಸ್ಸನ್ನ ನೋಯಿಸಿದೆ. - ನನಗೆ ಅಂತ ಇಷ್ಟು ಕಾಳಜಿ ಪಡೋರು ಯಾರು ಈ ಲೋಕದಲ್ಲಿದ್ದಾರೆ ? " ಎಂದು ಐವತ್ತು ವಯಸ್ಸಿನ ಯಜಮಾನರು ಪರಿತಾಪ ಪಟ್ಟರು. " ಇನ್ನುಮೇಲಾದರೂ ಈಕೆಯ ಮನಸ್ಸನ್ನು ನೋಯಿಸಬಾರದು " ಅಂತ ಶಪಥಮಾಡಿಕೊಂಡರು.

ಅತ್ತ ದೇವರ ಮನೆಯ ಕಡೆಗೆ ಹೋದ ಮೀನಾಕ್ಷಮ್ಮನವರು ಗೂಡಿನ ಬಾಗಿಲು ತೆಗೆದು ಕಾರ್ಡುಬೋರ್ಡಿನ ಪೆಟ್ಟಿಗೆಯೊಂದನ್ನು ಹೊರತೆಗೆದರು. ಹಗೂರಾಗಿ ಪೆಟ್ಟಿಗೆಯ ಮುಚ್ಚಳ ತೆಗೆದು, ಒಳಗಿದ್ದುದನ್ನು ನೋಡಿ ಹಿರಿಹಿರಿ ಹಿಗ್ಗಿದರು. ತಿರುಗಿ ಮುಚ್ಚಿದರು, ಜೋಪಾನವಾಗಿ ಅದನ್ನು ಕಂಕುಳಲ್ಲಿರಿಸಿಕೊಂಡು ಯಜಮಾನರ ಕೊಠಡಿಯತ್ತ ಒಳಗೆ ಬಂದರು.

" ನೋಡಿ ಅಂದ್ರೆ ! ನಾಲ್ಕು ದಿನಗಳ ಹಿಂದೆ ಔಷಧಿ ತರುಕ್ಕೆ ಅಂತ ಡಾಕ್ಟರ ದವಾಖಾನೆಗೆ ಹೋಗಿದ್ದಾಗ ಅಲ್ಲೇ ಜವಳಿ ಅಂಗಡಿ ಹತ್ತಿರ ಜಾನಮ್ಮ ಸಿಕ್ಕಿದರು. ಗೌರಿ ಹಬ್ಬಕ್ಕೆ ಸೀರೆ ಕೊಳ್ಳುತ್ತಿದ್ದರು. ನೋಡು ಬಾರೇ ಮೀನಾಕ್ಷಿ, ಇವೆರಡರಲ್ಲಿ ಯಾವ ಸೀರೆ ತೊಗೊಳ್ಳುವುದು ಅಂತ ತೀರ್ಮಾನಿಸಲು ಅಸಾಧ್ಯವಾಗಿದೆ, ನೀನು ಆಯ್ಕೆಮಾಡಿಕೊಡೆ. ನನಗೆ ಯಾವುದು ಚೆನ್ನಾಗಿ ಒಪ್ಪುತ್ತೆ ಎಂದು ಕರೆದರು. ಹಳೇ ಸ್ನೇಹಿತೆ, ಕರೆದಳಲ್ಲಾ ಅಂತ ಹೋದೆ. ನೋಡಿದೆ. ಅವಳು ತೋರಿಸಿದ ಒಂದು ಸೀರೆ ಬಲು ಚೆನ್ನಾಗಿತ್ತು. ಇನ್ನೊಂದು ಸುಮಾರಾಗಿತ್ತು. ಸುಮಾರಾಗಿದ್ದುದನ್ನೇ ನಿನಗೆ ಚೆನ್ನ ಅಂತ ಹೇಳಿ ಅಂಬುಜಮ್ಮ ಕೊಳ್ಳುವಂತೆ ಮಾಡಿದೆ. ಆಮೇಲೆ ದವಾಖಾನೆಗೆ ಹೋದೆ. ಔಷಧಿ ತೆಗೆದುಕೊಂಡು ಹಿಂತಿರುಗುವಾಗ, ಜವಳಿ ಅಂಗಡಿಗೆ ಹೋಗಿ ಆ ಸೀರೆಯನ್ನು ಕೊಂಡುಕೊಂಡೆ. ನಿಮ್ಮ ಹೆಸರಿನಲ್ಲಿ ಲೆಕ್ಕ ಬರೆಸಿದೆ. ತಂದಾಗ ನಿಮಗೆ ಜ್ವರ ಹೆಚ್ಚಾಗಿತ್ತು. ಕಫ ಹೆಚ್ಚಾಗಿ ಗೊರಗೊರ ಅಂತ ಶಬ್ದ ಬರುತಿತ್ತು. ಅದಕ್ಕೇ ಸೀರೆಯನ್ನು ಆಗ ತೋರಿಸಲಿಲ್ಲ. ದೇವರ ಮನೆ ಗೂಡಿನಲ್ಲಿಟ್ಟೆ. ಅಲ್ಲಿ ಜಿರಳೆ ಕಾಟ ಇಲ್ಲವಲ್ಲ ಅಂತ, ಗುಣವಾಗಿದೆ ಅಂತ ಡಾಕ್ಟರು ಹೇಳಿದ ಮೇಲೆ ಧೈರ್ಯ ಬಂತು, ನೋಡಿ ಅಂದ್ರೆ, ಈ ಸೀರೆ ಚೆನ್ನಾಗಿಲ್ಲವೇ ? ಈ ಸರ್ತಿ ಗೌರಿಹಬ್ಬಕ್ಕೆ ಇದನ್ನು ಉಟ್ಟುಕೊಂಡು ಹೋದರೆ, ಪೂಜೆಗೆ ಬಂದವರೆಲ್ಲಾ ನನ್ನನ್ನೇ ನೋಡ್ತಾರೆ. ನೂರಿಪ್ಪತ್ತೇ ರೂಪಾಯಿ ಅಂದ್ರೆ" ಎಂದು ತಡವಿಲ್ಲದೆ ಹೇಳುತ್ತಾ, ಸೀರೆಯ ಪಲ್ಲುವನ್ನು ಬಿಚ್ಚಿ ತೋರಿಸಿದರು.

" ಅಯ್ಯೋ ದೇವರೇ ! ಈ ಸೊಬಗಿಗೆ, ಸ್ವಲ್ಪಹೊತ್ತು ಮುಂಚೆ ತಾನೆ ಅನ್ಯಾಯವಾಗಿ ಪರಿತಾಪ ಪಟ್ಟೆನಲ್ಲ. ಜ್ವರದ ಸನ್ನಿ ಏರಿಸಿ, ಈಕೆ ಈ ಸೀರೇನ ಉಡದೆ ಇರೋ ಹಾಗೆ, ದೇವರು ಮಾಡಬಾರದಾಗಿತ್ತೆ" ಎಂದು ಯಜಮಾನರು ಹಲುಬಿದರು. ಪಾಪ ! ಇನ್ನೇನು ತಾನೇ ಮಾಡಾರು ? ಇಷ್ಟೀಟಿನ ಸಾಲವೇ ಮುನ್ನೂರಿರುವಾಗ, ಸೀರೆಗೆ ಅಂತ ನೂರಿಪ್ಪತ್ತನ್ನ ಹೇಗೆ ಹೊಂದಿಸಾರು ?

—ಪ್ರಸಾದ್.

# ಸಾಬರ್ ಜೆಟ್

" ಸಾಬರ್‌ಜಟ್ ! ಸಾಬರ್‌ಜಟ್ !
ಏನೇನೆಲ್ಲಾ ಮಾಡ್ತಿ, ಎನ್ನಲುಂ ॥
ಜಟ್ಟುಂತೆಗರಿ ಸರ್‍ರನೆ ತಿರುಗಿ ।
ಪಲ್ಟಿ ಹಾಕುವೆನೆಂದಿತ್ತು ॥ ೧ ॥

ಸಾಬರ್‌ಜೆಟ್ಟಿಗೆ ಸಾಬಿಯೆ ಸಾರಥಿ ।
ಗುಂಡನು ಸಿಡಿಸುತ ಎರಗಿದುವು ॥
ಅಂಕಲ್‌ಸ್ಯಾಮಿನ ಬಿಂಕದ ದೂತರು ।
ಬಳುವಳಿಯಾಗೇ ಬಂದವರುಂ ॥ ೨ ॥

ಎಂತಹ ಜೋರು ! ಏನದರಾರ್ಭಟ !
ಜುಟ್ಟನು ಎಗರಿಸಿ ಹಾರಿದುವು ॥
'ಯಾರೇ ಬರಲಿ, ಎದುರಿಗೆ ಸಿಕ್ಕಲಿ ।
ಪುಡಿಪುಡಿ ಮಾಡುವೆವೆಂದೆನುತಂ ॥ ೩ ॥

ನಮ್ಮಾ ದೇಶದಿ ನಮ್ಮಯ ಜನರೇ ।
ಕಿಡಿಕಿಡಿ ನ್ಯಾಟನು ಕಟ್ಟಿದರುಂ ॥
ಯಾರೇ ಬರಲಿ, ಎದುರಲಿ ನಿಲುವೆವು ।
ಎಂದವು ನಮ್ಮಯ ನ್ಯಾಟುಗಳು ॥ ೪ ॥

ಸಾಬರ ಜೆಟ್ಟು, ಜುಟ್ಟನು ಹಾರಿಸಿ ।
ಗುಡುಗುಡುಗುಟ್ಟುತ ಬಂದಾಗ ॥
ಸಡಗರದಿಂದಲೇ ನ್ಯಾಟುಗಳೇರಿ ।
ಜೆಟ್ಟಿನ ಜುಟ್ಟನು ತುಂಡರಿಸಿ ॥ ೫ ॥

" ಇನ್ನೂ ಬನ್ನಿ, ಜತೆಯಲಿ ಬನ್ನಿ ।
ಜತೆಜತೆಯಲ್ಲೇ ಕೆಡವುವೆವು" ॥
ಎನ್ನುತ ಸಾಬರ್ ಜಟ್ಟುಗಳೆಲ್ಲಕು ।
ಯಮನಾ ಹಾದಿಯ ತೋರಿದುವು ॥ ೬ ॥

—ಎಚ್. ಎಸ್. ರಾವ್.

# ಇದಾದರೆ-ಅದು

★

ಸಂಸ್ಕೃತ ವಿದ್ಯಾನಿಲಯದಲ್ಲಿ ಪಂಡಿತರ ಕೆಲಸ ಖಾಲಿಯಾಗಿತ್ತು. ಹತ್ತಾರು ಜನ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಸಂಸ್ಥೆಯ ಕುಲಪತಿಗಳು ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ, ಮೂವರನ್ನು ಭೇಟಿಗಾಗಿ ಆಹ್ವಾನಿಸಿದರು.

ಮೂರೂ ಜನ ಪಂಡಿತರು ತಾವು ಓದಿದ್ದುದನ್ನೆಲ್ಲಾ ತಿರುಗಿ ಪುಟ ಹಾರಿಸಿ ನೋಡಿಕೊಂಡರು. ಸಂಸ್ಥೆಯ ಕುಲಪತಿಗಳು ಉದ್ದಾಮ ಪಂಡಿತೋತ್ತಮರು. ಅವರು ಭೇಟಿ ಮಾಡಿದರು ಎಂದರೆ ಚಾಣಾಕ್ಷ ಪ್ರಶ್ನೆಗಳನ್ನು ಕೇಳಿಯೇ ಕೇಳುತ್ತಾರೆ ಎಂದು ಮೂವರೂ ಎಚ್ಚರಿಕೆ ವಹಿಸಿದ್ದರು.

ಪ್ರಾತಃಕಾಲ ಒಂಭತ್ತಕ್ಕೆ ಮೂವರೂ ಭೇಟಿಗೆ ಸಿದ್ಧರಾದರು. ಯಾರನ್ನು ಮೊದಲು ಪ್ರಶ್ನಿಸಲು ಕರೆಯುತ್ತಾರೆ ಎಂದು ಮೂವರೂ ಯೋಚಿಸುತ್ತ ಇರುವಾಗಲೇ. ಸೇವಕನು ಬಂದು " ಮೂವರೂ ಒಳಕ್ಕೆ ಬರಬೇಕು " ಎಂದು ತಿಳಿಸಿದ.

ಒಬ್ಬರ ಮುಖ ಒಬ್ಬರು ನೋಡಿಕೊಂಡು ಒಳಕ್ಕೆ ಹೋದರು. ಇವರನ್ನು ಕಂಡಮೇಲೆ ಕುಲಪತಿಗಳು ತಮ್ಮೆದುರಿನಲ್ಲಿದ್ದ ಹಾಳೆಗಳಿಂದ ಮೂರು ಭೂಪಟಗಳನ್ನು ಎತ್ತಿಕೊಂಡರು. ಮೂರನ್ನೂ ೧೦–೧೨ ಚೂರು ಚೂರಾಗಿ ಸಿಕ್ಕಾಪಟ್ಟೆ ಹರಿದರು. ಒಂದೊಂದರ ಚೂರನ್ನೂ ಒಬ್ಬೊಬ್ಬ ಅಭ್ಯರ್ಥಿಯ ಕೈಗೆ ಕೊಟ್ಟು ಇವನ್ನೆಲ್ಲಾ ಸರಿಯಾಗಿ ಪುನಃ ಜೋಡಿಸಿ, ಭೂಪಟ ಮಾಡಿ ಎಂದು ಹೇಳಿದರು.

ಮೂವರೂ ಮೂರು ಮೂಲೆಗಳಿಗೆ ಹೋಗಿ ಚೂರುಗಳನ್ನು ಎದುರಿನಲ್ಲಿಟ್ಟು ಕೊಂಡು, ಪಂಡಿತರ ಪರೀಕ್ಷೆ ಎಂದರೆ ಇದೇನೇ ? ಕುಲಪತಿಗಳಿಗೆ ತುಸು ಅರಳು ಮರಳು ಆಗಿರಬೇಕು, ಎಂದುಕೊಂಡೇ ಭೂಪಟವನ್ನು ಪುನರ್ನಿರ್ಮಾಣ ಮಾಡಲು ತೊಡಗಿದರು.

ಐದೇ ನಿಮಿಷಗಳಲ್ಲಿ ಮೂರನೆಯವ ಎದ್ದು ಕುಲಪತಿಗಳ ಬಳಿಗೆ ಬಂದು. " ಮುಗಿಸಿದ್ದೀನಿ ;" ಎಂದು ಬಿನ್ನವಿಸಿಕೊಂಡ. ಇನ್ನೆರಡು ಮೂಲೆಗಳಲ್ಲಿದ್ದ ಇಬ್ಬರೂ ಇಷ್ಟು ಬೇಗ ಹೇಗೆ ಮುಗಿಸಿದ ಎಂದು ಆಶ್ಚರ್ಯಪಡುತ್ತಿದ್ದರು.

" ಇಷ್ಟು ಬೇಗ ಹೇಗೆ ಮುಗಿಸಿದೆಯಪ್ಪಾ !" ಎಂದು ಕುಲಪತಿಗಳು ಕೇಳಿದರು. ತುಸು ನಗೆ ಮೂಡಿತ್ತು ಅವರ ಮುಖದಮೇಲೆ.

" ಭೂಪಟದ ಹಿಂದೆ ಮನುಷ್ಯನ ಬೊಂಬೆಯಿತ್ತು. ಮನುಷ್ಯನನ್ನು ಸರಿಗೂಡಿಸಿದೆ. ಭೂಪಟ ಸರಿಹೋಯಿತು." ಎಂದವನು ವಿಶದೀಕರಿಸಿದ, ಅವನಿಗೆ ಕೆಲಸ ಸಿಕ್ಕಿತು.

ದಿಟ. ಮನುಷ್ಯನನ್ನು ಸರಿಗೂಡಿಸಿದರೆ ಭೂಪಟವೇನು ? ಭೂಲೋಕವೇ ಸರಿಯಾಗುತ್ತದೆ.

—ಶ್ರೀಮತಿ ಮೀರಾರಾಣಿ.




ನಿನಗೇನು ಬೇಕೊ ಪಾಪಚ್ಚಿ ?—ಸೀಬೇಹಣ್ಣ, ಟೊಮ್ಯಾಟೋನ, ಯಾವ ಹೂ ಬೇಕಾದ್ರೂ ಕೇಳಪ್ಪಾ—ಕಿತ್ಕೊಡ್ತೀನಿ !

# ಸುತ್ತಲೂ ಕತ್ತಲೆ-ಕಗ್ಗತ್ತಲೆ

ಎಂದು ಕುವೆಂಪು ಅವರು ಸುಮಾರು ಮೂರು ದಶಕಗಳಿಗಿಂತ ಹಿಂದೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಾಡಿದರು. ಭಾವಪೂರ್ಣವಾಗಿ ಅವರು ಹಾಡಿದಾಗ, ಶ್ರೋತೃಗಳು ಕಣ್ಣುಮುಚ್ಚಿ ಭಾವನಾ ಪರವಶರಾಗಿದ್ದರು, ಕಗ್ಗತ್ತಲು ಚೆನ್ನಾಗಿ ಕಾಣಿಸುವಂತಾಯಿತು, ಕುವೆಂಪು ಅವರ ಹಾಡನ್ನು ಕೇಳಿದಾಗ.

ಕಗ್ಗತ್ತಲನ್ನು ಅದರ ಭೀಕರತೆಯನ್ನು ನಮಗೆ ಕಾಣಿಸುವಂತೆ ಮಾಡಿದರೆ, (ವರ ಕವಿಯು) ಪಾಕ್-ಚೀಣೀ ಆಕ್ರಮಣದ ಫಲವಾಗಿ ನಮ್ಮ ಊರಿನಲ್ಲಿ ಕತ್ತಲೆಯಲ್ಲೇ ಕಗ್ಗತ್ತಲೆಯನ್ನು ಕಾಣುವ ಅನುಭವ ಬರುತ್ತಿದೆ. ಕೆಲವು ದಿನಗಳಿಂದ ಅಭ್ಯಾಸಕ್ಕೆ ಬಂದ ಕತ್ತಲಿಸುವಿಕೆ, ಕಾರ್ಗತ್ತಲುವಿಕೆ, ನಮ್ಮ ಓದುಗರ ಮೇಲೆ ಯಾವ ರೀತಿ ಪರಿಣಾಮವನ್ನುಂಟುಮಾಡಿತು ಎಂಬುದನ್ನು ತಿಳಿಯಲೋಸುಗ, ಹಲವಾರು ಓದುಗರಿಗೆ ಪತ್ರಬರೆದೆವು, ಆವರಲ್ಲಿ ಹಲವಾರು ಮಿತ್ರರು ದಯಮಾಡಿ ಉತ್ತರಿಸಿದರು. ಇತರ ಓದುಗರಿಗೂ ಉತ್ತರಗಳು ಕತ್ತಲೆಯಲ್ಲಿ ಬೆಳಕು ಚೆಲ್ಲಬಹುದೆಂದು ತೋರಿತು. ಕಾರಣ ಅವುಗಳನ್ನು ಪ್ರಕಟಿಸಿದ್ದೇವೆ.

ಕುಮಾರಿ ರಂಭೆ...ಕುಂಬಳಿಪೇಟೆ, ಈಕೆಯು ಬರೆಯುತ್ತಾಳೆ :—

"ನೊನ್ನೆ ಮನೆಗೆ ಹಿಂತಿರುಗುತ್ತಿದ್ದಾಗ ಸಂಜೆ ಏಳೂವರೆ ಗಂಟೆಯ ಸಮಯದಲ್ಲಿ ನಮ್ಮನೆ ಬೀದಿಯ ತುದಿಯಲ್ಲಿದ್ದೆ. ಇನ್ನೇನು ಎರಡು ನಿಮಿಷಗಳಲ್ಲಿ ಮನೆ ಸೇರಿಕೊಳ್ಳಬಹುದು ಎಂದುಕೊಂಡೆ. ಆದರೆ ಥಟ್ಟಂತ ದೀಪಗಳೆಲ್ಲಾ ಆರಿಹೋದುವು. ಒಂದು ಕ್ಷಣ ಕಪ್ಪುಕಪ್ಪುಕತ್ತಲು ಬಡಿಯಿತು ಕಣ್ಣಿಗೆ. ಎರಡು ಕ್ಷಣ ಸುಧಾರಿಸಿಕೊಂಡೆ. ಹೇಗೂ ತಿಳಿದ ರಸ್ತೆ. ನೆಪ್ಪಿನಮೇಲೆ ಮನೆ ಸೇರಿಕೋಬಹುದು ಎಂದುಕೊಂಡೆ. ಸ್ವಲ್ಪ ಮುಂದಕ್ಕೆ ಹೆಜ್ಜೆಹಾಕಿದೆ. ಅಷ್ಟರಲ್ಲೇ ಕತ್ತಲಲ್ಲಿ ಯಾರೋ ಹಿಂದೆ ಬಂದು ತಾಯಿತು. "ಯಾರ್ರೀ ಅದು ! ಏರ್ ರೈಡ್ ಸೈರನ್ ಕೇಳಿಸಲಿಲ್ವೇ. ಬೇಗ ಹತ್ತಿರ ಇರುವ ಮನೆಗೆ ಹೋಗಿ" ಅಂತ ಕೂಗಿದರು. ಪಕ್ಕದಲ್ಲಿದ್ದ ಮನೆಗೆ ನುಗ್ಗಿದೆ. ಕೂಗಿದವರ ಕೈಯಿಂದಲಾದರೂ ಪಾರಾಗೋಣ ಅಂತ. ಪಕ್ಕದಮನೆ ಗೇಟು ದಾಟುವ ಹೊತ್ತಿಗೆ, ಕೂಗಿದವರು ಮುಂದಕ್ಕೆ ಜೀಪಿನಲ್ಲಿ ಹಾದುಹೋದರು.

ಆ ಮನೆಯ ವರಾಂಡದಲ್ಲಿ ನಿಂತಿರೋಣ ಅಂತ ಹೆದರಿಕೊಂಡು ಹೆದರಿಕೊಂಡೇ ನಡೆದೆ. ಅಷ್ಟರಲ್ಲೇ ನೋಡಿ ಬೌ ಬೌ ಅಂತ ಬೊಗಳುತ್ತಾ ಧಡೂತಿ ನಾಯಿಯೊಂದು ಬಂದು ನನ್ನ ಕಾಲನ್ನು ಕಚ್ಚಿತು. "ಅಯ್ಯೋ ಎಂದು ವಿಮಾನ ಧಾಳಿ ಆದಾಗ, ಬಾಂಬು ನನಗೇ ತಗುಲಿದಾಗ ಬಡಿದುಕೊಳ್ಳುವ ತರಹ, ಅರಚಿಕೊಂಡೆ. ಆ ಮನೆಯಿಂದ ಯಾರೋ ಜಾನಿ ಜಾನಿ ಅಂತ ನನ್ನ ಕೂಗಿನ ಜತೆಗೂ ಕೂಗಿಕೊಂಡರು. ಆದರೆ ಜಾನಿ ನನ್ನ ಕಾಲಿನ ಮೇಲೆ ಇದ್ದ ಸೀರೆಯನ್ನು ಕಚ್ಚಿಕೊಂಡೆ ಇತ್ತು. ಕೂಗಿದವರ ಕರೆ ಅದಕ್ಕೆ ಕೇಳಿಸಲೇ ಇಲ್ಲ. ಸ್ವಲ್ಪ ಹೊತ್ತಿನಮೇಲೆ ಯಾರೋ ಮೊಂಬತ್ತಿಯೊಂದನ್ನು ಮಿಣುಮಿಣುಗುಟ್ಟಿಸುತ್ತಾ, ಮನೆಯಿಂದ ಬಂದರು. ನನ್ನ ಮುಖ ನೋಡಿದರು. ನಾಯನ್ನೂ ನೋಡಿದರು. "ಈ ಹೊತ್ತಿನಲ್ಲಿ ಮನೆಯೊಳಕ್ಕೆ ಯಾಕೆ ಬಂದೆಯಮ್ಮಾ! "ಗೇಟಿನ ಮೇಲೆ ನಾಯಿಗಳಿವೆ. ಎಚ್ಚರಿಕೆ" ಅಂತ ಬೋರ್ಡ್ ಹಾಕಿದ್ದೀವಲ್ಲ! ಕಾಣಿಸಲಿಲ್ಲವೇ? ಓದು ಬರುತ್ತೆ ಅಲ್ಲವೇ" ಎಂದು ನನ್ನನ್ನೇ ಬೈಯುಕ್ಕೆ ಶುರುಮಾಡಿದನೇ ಹೊರತು; ನಾಯನ್ನು ಕರೆದುಕೊಳ್ಳಲು ಪ್ರಯತ್ನಿಸಲೇ ಇಲ್ಲ. ನಾಯನ್ನು ಹಿಡಿದುಕೊಳ್ಳಿ, ವಿಷಯ ತಿಳಿಸ್ತೀನಿ ಅಂದೆ. ಜಾನಿ ಜಾನಿ ಅಂತ ಅದರ ಕತ್ತಿನ ಪಟ್ಟಿಯನ್ನು ಹಿಡಿದ. ಆದರೆ ಆ ನಾಯಿ ಜಗ್ಗಬೇಕಲ್ಲ! ಸೀರೆ ಅಷ್ಟು ರುಚಿಯಾಗಿತ್ತೇನೋ ಆ ಹಾಳು ನಾಯಿಗೆ. ಆಗ ಮೊಂಬತ್ತಿಯುವ "ಲೇ! ಲೇ! ಬಾರೆ. ಈ ನಾಯಿ ನಾನು ಹೇಳಿದ ಹಾಗೆ ಕೇಳಲ್ಲ" ಅಂತ ಕೂಗಿದ. ಮೊಂಬತ್ತಿಯುವನ ಹೆಂಡತಿ ಗಜಗಮನೆ. ಆಕೆ ಬರುವ ಹೊತ್ತಿಗೆ ನಾನು ಬೆವತು ಸುಸ್ತಾಗಿದ್ದೆ. ಆಕೆ ಬಂದು ನಾಯನ್ನು ಪೂಸಿಮಾಡಿ ಕರೆದಾಗಲೇ ಆ ನಾಯಿ ನನ್ನ ಸೀರೇನ ಬಿಟ್ಟಿದ್ದು ಆದರೆ ಸೀರೆಯ ಒಂದು ತುಂಡು ಅದರ ಬಾಯಲ್ಲೇ ಉಳಿದಿತ್ತು. ಆಕೇನೂ ತಗುಲಿಕೊಂಡಳು, ಯಾಕೆ ಗೇಟೊಳಕ್ಕೆ ಬಂದೆ ಅಂತ. "ಹೀಗಾಯ್ತಮ್ಮ. ಯಾರೋ ರಸ್ತೇಲಿ ಹೆದರಿಸಿದರು. ರಕ್ಷಣೆ ಪಡಿ. ಮನೆಯೊಳಕ್ಕೆ ಓಡು ಅಂತ, ಇಲ್ಲೇ ಇದ್ದೆ. ಇಲ್ಲಿಗೆ ಬಂದೆ. ಕತ್ತಲೆಯಾಗಿತ್ತು. ಗೇಟಿನ ಮೇಲಿನ ಬೋರ್ಡ್ ಕಾಣಿಸಲಿಲ್ಲ. ರಸ್ತೇಲಿ ಹೋದರೆ ಗುಮ್ಮನಕಾಟ, ಮನೆ ಒಳಕ್ಕೆ ಹೋದರೆ ಅಮ್ಮನ ಕಾಟ. ಏನ್ಮಾಡಲಮ್ಮ! ಅಂತಂದೆ. ಆಗ ಬೆಳಕು ಒಂತು. ಏರ್ ರೈಡ್ ಸೈರೆನ್ ಬಡಿದುಕೊಂಡಿತು. ಮನೆಗೆ ಹೋದೆ. ಸೀರೆ ಹೇಗೆ ಹರಿದುಕೊಂಡು ಬಂದೆಯೋ ಅಂತ ನಮ್ಮ ತಾಯಿ ತಗುಲಿಕೊಂಡರು. "ಹತ್ತು ದಿವಸ ಅತ್ತು ಕರೆದು ನಿಮ್ಮಪ್ಪನ ಹತ್ತಿರ ಈ ಸೀರೆಗೆ ದುಡ್ಡು ಗಿಟ್ಟಿಸಿದ್ದೆ. ಸುಲಭವಾಗಿ ಹರಿದುಕೊಂಡು ಬಂದೆಯಲ್ಲಾ." ಅಂತ ರೇಗಿದಳು. ಹೀಗಾಯ್ತು ಅಂತ ಒಪ್ಪಿಸೋಹೊತ್ತಿಗೆ ಸುಸ್ತಾಗಿ ಹೋದೆ.

ತುರ್ತುಪರಿಸ್ಥಿತಿ ಇರೋ ತನಕ, ನಾಯಿಗಳನ್ನು ಮನೆಯವರು ಕತ್ತಲಲ್ಲಿ ಕಟ್ಟಿರಬೇಕು. ರಾತ್ರಿ ಯಾವ ಹೊತ್ತಿನಲ್ಲಿ ಏರ್ ರೈಡ್ ಅಲರ್ಟ್ ಕೂಗುತ್ತೊ? ರಸ್ತೆಯಲ್ಲಿ ಆಗ ಇದ್ದವರು ಆ ಮನೆಗೆ ಓಡಬೇಕಾಗುತ್ತೆ? ಅನ್ಯಾಯವಾಗಿ ನಾಯಿಗಳ ಕೈಲಿ ಕಡಿಸಿಕೊಳ್ಳಬೇಕಾಗುತ್ತೆ.

[ಅಯ್ಯೋ ! ಪಾಪ ! ಕುಮಾರಿ ರಂಭಾಗೆ ಆದದ್ದು ನಮಗೂ ಆಗಬಹುದು. ಆದರೆ ನಮ್ಮ ಕಾಲಿಗೆ ಸೀರೆ ರಕ್ಷಣೆ ಇಲ್ಲ. ಕಾಲೇ ನಾಯಿ ಬಾಯಿಗೆ ಸಿಗುತ್ತೆ. ನಮಗೆ ಸಕ್ಕರೆ ಕಾಯಿಲೆ ಬೇರೆ. ಸಿಹಿಯಾಗಿದೆ ಅಂತ ನಾಯಿ ತಿನ್ನುವುದನ್ನು ಮುಂದುವರಿಸಿದರೆ ? ಮನೆಗೆ ನುಗ್ಗಿ ನಾಯಿಗೆ ಸಿಕ್ಕಿಹಾಕಿಕೊಳ್ಳುವ ಬದಲು ರಸ್ತೆಯಲ್ಲಿ ಪೋಲೀಸಿನವರ ಕೈಲಿ ಸಿಕ್ಕಿಕೊಳ್ಳುವುದು ಕ್ಷೇಮ.—ಸಂಪಾದಕ.]

* * * *

ಅಷ್ಟಾವಧಾನಿ ಶಿವಯ್ಯಶಾಸ್ತ್ರಿಗಳು, ಪಾಳೇಗಾರ್‌ಪೇಟೆ, ಅವರು ಬರೆಯುತ್ತಾರೆ :—

" ಮೊನ್ನೆ ನಮ್ಮ ಗಿರಾಕಿಯೊಬ್ಬನು ಮರಣ ಹೊಂದಿದ. ಅವನನ್ನು ಆದಷ್ಟು ಬೇಗ ದಹನಮಾಡಿ ಬರೋಣ ಅಂತ ಎಷ್ಟೋ ಪ್ರಯತ್ನಪಟ್ಟೆ. ಆದರೆ ಹಸಿ ಸೌದೆಯ ಪ್ರಯುಕ್ತ, ಹಾಗು ಸತ್ತವನ ಮಕ್ಕಳ ಅಳುವಿನಿಂದಾಗಿ ಬೇಗ ಬೇಗ ಮುಗಿಸಲಾಗಲಿಲ್ಲ ಹಾಗಾಗಿ ಸ್ನಾನ ಮುಗಿಸಿ ಮನೆಯತ್ತ ಹಿಂತಿರುಗುವ ವೇಳೆಗೆ ರಾತ್ರಿಯಾಗಿ ಹೋಗಿತ್ತು. ನಮ್ಮನೆಯ ಸಂದಿಗೆ ಇನ್ನೇನು ತಿರುಗಬೇಕು ! ದೀಪಗಳೆಲ್ಲಾ ಆರಿ ಹೋದುವು: ನಮ್ಮನೆ ಸಂದಿನಲ್ಲಿ ಸೀಮೆ ಎಮ್ಮೆಗಳು ಮಲಗಿರುವುದು ಗೊತ್ತಿತ್ತು. ಆದುದರಿಂದ ಮುಂದೆ ನಡೆಯದೆ, ಎಡ ಪಕ್ಕದಲ್ಲಿದ್ದ ಕಾಕಾ ಹೋಟಲಿಗೆ ಹೋಗಿ ಕುಳಿತೆ. ಆಪತ್ಕಾಲದಲ್ಲಿ ಕಾಕಾ ಹೋಟಲೇನು ಬ್ರಾಹ್ಮಣರ ಭವನ ಆದರೇನು ? ಕಾಕಾ ಹೋಟಲಲ್ಲಿ ಸುಮಾರು ಜನ ತುಂಬಿದ್ದರು. ಆದ್ದರಿಂದ ಹೊರಬಾಗಿಲ ಬಳಿಯಲ್ಲೇ ಬೆಂಚಿನ ಮೇಲೆ ಕೂತಿದ್ದೆ.

ಇಬ್ಬರು ಯುವಕರು—ಗೃಹರಕ್ಷಣಾ ದಳದವರು ಅಂತ ಕಾಣಿಸುತ್ತೆ ಆ ರಸ್ತೆಯಲ್ಲಿ ಬಂದರು. ಮೋಂಬತ್ತಿ, ಬೆಳಕು ಕಾಣಿಸದ ಹಾಗೆ ಬಾಗಿಲು ಹಾಕಿಕೊಳ್ಳಿ. ಅಂತ ಎಚ್ಚರಿಕೆ ಕೊಡುತ್ತಾ, ನಮ್ಮನೆಯಿರುವ ಸಂದಿಗೆ ತಿರುಗಿದರು. " ಅಯ್ಯೋ ! ತಿಳಿಯದ ಹುಡುಗರು ! ಇನ್ನೂ ಯುವಕರು ! ಉತ್ಸಾಹದಿಂದ ದೇಶಸೇವೆಯನ್ನು ಮಾಡುತ್ತಿರುವವರು, ಇವರು ಕತ್ತಲಲ್ಲಿ ಸಂದಿಯಲ್ಲಿ ನಡೆಯುವಾಗ, ಸೀಮೆ ಎಮ್ಮೆಗಳ ಪಾಲಾಗುತ್ತಾರಲ್ಲಾ ! ಹುಷಾರ್ ಕೊಡೋಣ " ಅಂತ " ಅಯ್ಯಾ ! ಅಪ್ಪಾ ! " ಅಂತ ಕೂಗಿದೆ, ಅಷ್ಟರಲ್ಲಿ ಅವರು ಸಂದಿಯಲ್ಲಿ ತುಂಬಾ ಮುಂದೆ ನಡೆದು ಹೋಗಿದ್ದರು. ಸ್ವಲ್ಪ ಹೊತ್ತಿನಲ್ಲಿ ಇಬ್ಬರು ಯುವಕರೂ ಕೂಗಿಕೊಂಡರು. ಧಡಬಡ ಶಬ್ದ ಆಯಿತು. ಅಕ್ಕ ಪಕ್ಕದ ಮನೆಗಳ ಬಾಗಿಲುಗಳು ತೆಗೆದ ಸಪ್ಪಳವಾಯಿತು. ಎಲೆಕ್ಟ್ರಿಕ್ ಟಾರ್ಚ್ ಹಿಡಿದುಕೊಂಡು ಕೆಲವರು, ಹಣತೆ ಹಿಡಿದುಕೊಂಡು ಕೆಲವರು ಮನೆಗಳಿಂದ ಸಂದಿಗೆ ಇಳಿದಿದ್ದರು. ಬೆಳಕು ಕಂಡಾಗ ನಾನು ಸಂದಿಗೆ ನಡದೆ. ಬೇಗ ಮನೆ ಸೇರಿಕೊಳ್ಳೋಣ ಅಂತ. ಅಲ್ಲೇನಾಗಿದೆ ! ಒಬ್ಬ ರಕ್ಷಣಾ ದಳದ ಸ್ವಯಂ

ಸೇವಕ ಮಲಗಿದ್ದ ಎಮ್ಮೆಯಮೇಲೆ ಎಡವಿದ್ದ. ಆ ಎಮ್ಮೆಯೊ ಶುದ್ಧ ಎಮ್ಮೆ. ಎಮ್ಮೆ ಮೇಲೆ ಮಳೆ ಬಿದ್ದರೇನು ? ಮನುಷ್ಯ ಬಿದ್ದರೇನು ? ಬಿದ್ದೇ ಇತ್ತು. ಆದರೆ ಇನ್ನೊಬ್ಬ ಸ್ವಯಂಸೇವಕ ಎಮ್ಮೆಯ ಬಾಲದಮೇಲೆ ಕಾಲಿಟ್ಟಾಗ ಅದು ಬಾಲವನ್ನು ಎತ್ತಿ ಝಾಡಿಸಿತು. "ಅಯ್ಯೋ ! ಹಾವು ಹಾವು" ಅಂತ ಅವ ಕೂಗಿಕೊಂಡ. ಮೊದಲ ಸ್ವಯಂಸೇವಕ. ಹಾವು ಎಂಬ ಕೂಗು ಕೇಳಿ ಏಳಲು ಹೋಗಿ ಎಮ್ಮೆಯ ಕೊಂಬುಗಳ ಮಧ್ಯೆ ಸಿಕ್ಕಿ ಹಾಕಿಕೊಂಡಿದ್ದ. ಆದರೂ ಎಮ್ಮೆ ಬಿದ್ದೇ ಇತ್ತು. ಟಾರ್ಚು ಹಣತೆಗಳನ್ನು ಅಕ್ಕಪಕ್ಕದ ಮನೆಯವರು ತಂದು ನೋಡಿ, ಮೊದಲ ಸ್ವಯಂಸೇವಕನನ್ನು ಎಮ್ಮೆಯ ಕೊಂಬುಗಳಿಂದ ಬಿಡಿಸಿದರು. ಪಾಪ ! ಜುಬ್ಬವೆಲ್ಲಾ ಹರಿದುಹೋಗಿತ್ತು. ಎರಡನೆಯ ಸ್ವಯಂ ಸೇವಕನ ಬಟ್ಟೆಯ ಮೇಲೆಲ್ಲಾ ಸಗಣಿ ಸಿಡಿದಿತ್ತು. ಇಬ್ಬರನ್ನೂ ನಮ್ಮನೆಗೆ ಕರೆದುಕೊಂಡು ಹೋದೆ. ಬೆಳಕು ಬಂತು ಉಪಚಾರ ಮಾಡಿ, ನೀರು ಕೊಟ್ಟು ಸಗಣಿ ತೊಳೆದು ಕಳಿಸಿದೆ.

ಸ್ವಾಮಿ ! ತಂತರ್ಗ ಪರಿಸ್ಥಿತಿ ಇರುವ ತನಕ ರಸ್ತೆಗಳಲ್ಲಿ, ಸಂದಿಗಳಲ್ಲಿ ಎಮ್ಮೆಗಳನ್ನು ಬಿಟ್ಟಿರಬಾರದು ಎಂದು ಕಾನೂನು ಮಾಡಬಾರದೆ ? ಮುಸಲ ಎಮ್ಮೆ, ಎಮ್ಮೆ ತರಹ ಬಿದ್ದಿರದೆ, ಕೋಣನ ತರಹ ಕುಣಿದಾಡಿದ್ದರೆ, ಸ್ವಯಂಸೇವಕ ಯುವಕರು ಅಪ್ಪಚ್ಚಿ ಆಗಿಬಿಡುತ್ತಿದ್ದರಲ್ಲ ! ಆಗತಾನೆ ಸ್ಮಶಾನದಿಂದ ಹಿಂತಿರುಗುತ್ತಿದ್ದೆ. ತಿರುಗಿ ರಾತ್ರಿಯಲ್ಲಿ ಸ್ಮಸಾನಯಾತ್ರೆ ಮಾಡಬೇಕಾಗಿ ಬರುತ್ತಿತ್ತಲ್ಲ ! ಇದಕ್ಕೆ ಏನಾದರೂ ಪರಿಹಾರ ಮಾರ್ಗ ಮಾಡಲೇಬೇಕು !

[ಅಷ್ಟಾವಧಾನಿಗಳನ್ನು ಹೋಗಿ ನೋಡಿದೆವು. ಮುಸಲಾ ಎಮ್ಮೆಗಳನ್ನು ಮರೆತು ಅವರೇನಾದರೂ ಸಂದಿಯಲ್ಲಿ ಮನೆಯಕಡೆಗೆ ಕತ್ತಲಲ್ಲಿ ಹೋಗಿದ್ದರೆ, ಮಲಗಿದ್ದ ಎಮ್ಮೆಗಳ ಮೇಲೆ ಬಿದ್ದುಗಿದ್ದಿದ್ದರೆ, ಸೀಮೆ ಎಮ್ಮೆ ಆದರೂ ಘಡ್ಡ ಆಗಿ ಬಿಡುತ್ತಿತ್ತು, ಎನ್ನಿಸಿತು. ಸೀಮೆ ಕೋಣನ ತರಹ ಇರುವ ಶಿವಯ್ಯಶಾಸ್ತ್ರಿಗಳಿಂದ, ಕಗ್ಗತ್ತಲೆಯಲ್ಲಿ ಎಮ್ಮೆಗಳಿಗೆ ರಕ್ಷಣೆ ಕೊಡಲೇಬೇಕು. ಪ್ರಾಣಿದಯೆ ಎನ್ನುವವರು ಅಷ್ಟನ್ನಾದರೂ ಸಮಾಜದಿಂದ ಮಾಡಿಸಲೇಬೇಕು, ಎಂದು ಅನ್ನಿಸಿತು. ಅಧಿಕಾರಿಗಳು ಕ್ರಮ ಕೈಗೊಳ್ಳುವರೆಂದು ನಂಬೋಣವೇ—ಸಂಪಾದಕ.]

* * * *

ಬಾಲನಾಗಯ್ಯ, ಬೀದಿ ಮಾರಾಟಗಾರ, ದೊಡ್ಡ ಚೌಕ. ಈ ಚಿರಂಜೀವಿ ಬರೆದಿದ್ದಾನೆ:—

"ಪ್ರಜಾಮತ, ಜನವಾಣಿ, ತಾಯಿನಾಡು" ಅಂತ ಕೂಗಿಕೊಂಡು ದೊಡ್ಡ ಚೌಕದಲ್ಲಿ ಮಾರುತ್ತಿದ್ದೆ. ಬಸ್ಸಿಗೆ ಹತ್ತುವವರು, ಬಸ್ಸಿಂದ ಇಳಿಯುವವರು, ದಿನಸಿ ಅಂಗಡಿಗೆ ಹೋಗುವವರು. ಎಲ್ಲರೂ ಒಂದಲ್ಲ ಒಂದು ಕೆಲಸಕ್ಕೆ ಪ್ರಯೋಜನಕ್ಕೆ ಬರುತ್ತೆ ಅಂತ ಪತ್ರಿಕೆಗಳನ್ನು ಕೊಳ್ಳುತ್ತಿದ್ದರು. ಎಂಟು ಹತ್ತು ರೂಪಾಯಿ ವ್ಯಾಪಾರವಾಗುತ್ತಿತ್ತು. ತಿಂಡಿ ಸಿನಿಮಾ ಖರ್ಚು ದೊರೆಯುತ್ತಿತ್ತು.

ಆದರೆ ಮೊನ್ನೆ ಬಸ್ ಷೆಲ್ಟರಿನ ಹತ್ತಿರ "ಪ್ರಜಾಮತ, ಜನವಾಣಿ" ಅಂತ ಕೂಗೋ ಹೊತ್ತಿಗೆ ಏರ್ ರೈಡ್ ಶಂಖ ಹೊಡೆದುಕೊಂಡಿತು. ತತ್‌ಕ್ಷಣವೇ ದೀಪ ಹೋಗಿಬಿಡ್ತು. ಬಸ್ ಷೆಲ್ಟರಿನಲ್ಲೇ ಉಳಿದುಕೊಳ್ಳೋಣ ಅಂತ ಹೋದೆ. ಅಲ್ಲೋ ಹುಡುಗರ ತಂಡ ತುಂಬಿತ್ತು. ಕಾಲೇಜು ಹುಡುಗರು ಅಂತ ಕಾಣುತ್ತೆ. ಯಾಕೆ ಅಂದರೆ ಸಿನಿಮಾ ತಾರೆಗಳ ಅಸಾಧ್ಯ ವರ್ಣನೆಯನ್ನು ಮಾಡುತ್ತಿದ್ದರು. "ಓ ಪೇಪರ್ ಹುಡುಗ ಬಂದ ಹಾಗಿದೆ ಕಣೋ" ಅಂತ ಯಾರೋ ಕೂಗಿದರು. ಗಲಭೆ ಆಯಿತು. ನೂಕು ನುಗ್ಗಲಾಯಿತು. ಎರಡೇ ನಿಮಿಷದಲ್ಲಿ ನನ್ನ ಕೈಲಿದ್ದ ಪತ್ರಿಕೆಗಳೆಲ್ಲಾ ಮಾಯವಾಗಿತ್ತು. ಅಯ್ಯಯ್ಯೋ ಅಂತ ನಾನು ಶಂಖ ಬಾರಿಸಲು ಶುರು ಮಾಡಿದೆ. ಹತ್ತಿರ ಇದ್ದವನನ್ನು ಹಿಡಿದುಕೊಂಡೇ ಕೂಗಿಕೊಳ್ಳಲಾರಂಭಿಸಿದೆ. ಒಬ್ಬನಾದರೂ ಸಿಗಲಿ. ಅವನನ್ನು ಪೋಲೀಸಿಗೆ ಹಿಡಿದುಕೊಡೋಣ ಅಂತ, ಬೆಳಕು ಬಂತು! ನೋಡಿದೆ. ನಾನು ಹಿಡಿದಿದ್ದವನು ಪೋಲೀಸಿನವನು. "ಯಾಕೆ! ಮಗು! ಅಷ್ಟು ಹೆದರಿಕೇನೆ ಕತ್ತಲು ಅಂದರೆ" ಅಂತ ಅವ ಒಲವಿನಿಂದ ಮಾತನಾಡಿಸಿದ. ಹೀಗಾಯ್ತಪ್ಪ, ಅಂತ ಹೇಳಿದೆ, ಅಷ್ಟು ಜನ ಹುಡುಗರಿದ್ದರು ಆಗ. ಕತ್ತಲೆಯಲ್ಲೇ ಮಾಯವಾಗಿ ಬಿಟ್ಟಿದ್ದಾರಲ್ಲ! ಖದೀಮರು ಎಂದೆ. ಹೋಗಲಿ ಬಿಡು, ಮುಂದೆ ಹುಷಾರಾಗಿರು ಅಂತ ಹೇಳಿದ. ಇನ್ನು ಮೂರು ದಿನ ಊಟಕ್ಕೆ ದುಡ್ಡಿಲ್ಲ. ಸಿನಿಮಾಕ್ಕೆ ಕಾಸಿಲ್ಲ. ಏಕೆಂದರೆ ಅಷ್ಟೂ ಪತ್ರಿಕೆಗಳ ಮೌಲ್ಯವನ್ನು ತೆರಲೇಬೇಕು.

ಏನಾದರೂ ಪರಿಹಾರ ದೊರಕುತ್ತದೆಯೋ? ನನ್ನಂತಹ ಚಿಕ್ಕಹುಡುಗರಿಗೆ; ಹೀಗೆ ಕಾಸು ಕಳೆದುಕೊಂಡವರಿಗೆ.

[ಅಯ್ಯೋ ಚಿರಂಜೀವಿ. ಮೂರು ದಿನ ಊಟಕ್ಕೆ ದುಡ್ಡಿಲ್ಲದೆ ಹೋದರೆ, ಏನಂತೆ ಬರೀ ತಿಂಡಿ ತಿಂದುಕೊಂಡಿರು. ಸಿನೀಮಾ ನೋಡದೆಇದ್ದರೆ ಕಣ್ಣು ಇಂಗಿ ಹೋಗುತ್ತ್ಯೆ? ಆದರೂ ಪತ್ರಿಕೆಗಳನ್ನು ಮಾರುವ ಹುಡುಗ ಚೂಟಿಯಾಗಿರಬೇಡವೇ? ಕತ್ತಲು ಆಗುತ್ತಿದ್ದ ಹಾಗೆಯೇ ಪತ್ರಿಕೆಗಳನ್ನು ಗಟ್ಟಿಯಾಗಿ ಹಿಡಿದುಕೊಂಡು. ಒಂದು ಮೂಲೇಲಿ ಕುಕ್ಕರಬಡಿಯಬಾರದಾಗಿತ್ತೇ? ನಿನಗ್ಯಾಕೆ ಷೆಲ್ಟರಿನ ಆಸೆ. ಅಜಾದಾಗಿ ಅಡ್ಡಾಡಿ ಬಾಡಿಗೆ ಕೊಡದೆ ಫುಟ್‌ಪಾತಿನ ಮೇಲೆ ವ್ಯಾಪಾರ ಮಾಡುವ ನಿನಗೆ ಷೆಲ್ಟರು ಆಸೆ ಏಕೆ ಬಂತು? ಇನ್ನೂ ಮುಂದಾದರೂ ಬುದ್ಧಿ ಕಲಿತುಕೋ. ಹಿಂದಿನ ದಿನದ ತಂಗಳು ಪತ್ರಿಕೆಗಳನ್ನು ಅಗ್ಗದ ದರದಲ್ಲಿಟ್ಟುಕೊಂಡು ಕೊಂಡು, ಬಿಸಿ ಪತ್ರಿಕೆಗಳಮಧ್ಯೆ ಅಲ್ಲಿ ಇಲ್ಲಿ ಇಟ್ಟು ಕೆಲವು ದಿನ ಮಾರು. ಹಾಗೆ ಮಾಡಿ ಆದ ನಷ್ಟವನ್ನು ಆದಷ್ಟು ಮಟ್ಟಿಗೆ ತುಂಬಿಕೋ—ಸಂಪಾದಕ.]

# ನಾಯಿ ಬಾಲ

ಶಿಂಗ್ರಯ್ಯನಿಗೆ ಸ್ನೇಹಿತರು ಗಿಣಿಗೆ ಹೇಳಿದ ಹಾಗೆ ಹೇಳಿದರು.—"ಡೈಜೆಸ್ಟುಗಳಲ್ಲಿ ಬಂದಿದ್ದೆಲ್ಲ ವೇದವಾಕ್ಯ ಅಂತ ನಂಬಿ ಕೆಡಬೇಡ" ಅಂತ. ಆದರೆ ಆತ ಕೇಳಬೇಕಲ್ಲ. ಡೈಜೆಸ್ಟುಗಳಲ್ಲಿ ಬರುವ ನಾನಾ ರೋಗಗಳ ಲಕ್ಷಣಗಳು ತನ್ನಲ್ಲಿಯೇ ಇವೆಯೆಂದು ಶಂಕಿಸಿ ಶಿಂಗ್ರಯ್ಯನ ದೇಹ ಬಡವಾಯಿತು. ಸಲ್ಲದ ಚಿಂತೆಗಳನ್ನು ಹಚ್ಚಿಕೊಂಡು ಮನಸ್ಸು ಬಡವಾಯಿತು. ಡಾಕ್ಟರುಗಳ ಪರ್ಸು ಬಲಿಯಿತು.

ಡೈಜೆಸ್ಟುಗಳಲ್ಲಿ ತಜ್ಞರೆನ್ನುವವರು ವಿವರಿಸಿರುತ್ತಾರಲ್ಲ—ಸಮುದ್ರದ ನೀರು ಉಪ್ಪೇಕೆ? ಮೋಡಗಳಲ್ಲೆಷ್ಟು ವಿಧ, ನೀರಿನೊಳಗೆ ಕಪ್ಪೆಗೆ ಕಣ್ಣು ಕಾಣಿಸುತ್ತೆಯೆ, ಸಂತಾನ ನಿರೋಧಕಗಳಲ್ಲಿ ಅತ್ಯುತ್ತಮವಾದುದು ಯಾವುದು, ಹೃದಯದ ಒತ್ತಡವಿರುವವರು ಎಷ್ಟು ಮಾತಾಡಬಹುದು, ಯಾವ ಯಾವ ದೇಶದಲ್ಲಿ ಸುಂದರಿಯರು ಬಡನಡುವಿಗಾಗಿ ಯಾವ ಯಾವ ಕಾರ್ಯಕ್ರಮ ಕೈಗೊಂಡಿದ್ದಾರೆ, ಕೋಳಿಗಳು ಹೆಚ್ಚು ಮೊಟ್ಟೆಯಿಡುವಂತಾಗಲು ಏನೇನು ಮಾಡಬೇಕು, ದಾಂಪತ್ಯ ಜೀವನ ಸಫಲವಾಗಲು ಗಂಡು ಹೆಣ್ಣು ದಿನಕೆಷ್ಟು ಸಲ ಅಳಬೇಕು, ದೇಶಾವರಿ ನಗಬೇಕು ಅಥವಾ ಜಗಳವಾಡಬೇಕು—ಹೀಗೆ ಹತ್ತು ಹಲವು ವಿಷಯಗಳನ್ನೆಲ್ಲ ಮುಂದಟ್ಟು ಮಾಡಿಕೊಂಡು ತನ್ನ ಅಂಗಡಿಗೆ ಬಂದವರನ್ನೆಲ್ಲ ಬೆರಗುಗೊಳಿಸಲು ಪ್ರಯತ್ನಿಸುತ್ತಿದ್ದ—ಶಿಂಗ್ರಯ್ಯ.

“.ಮಹರಾಯ ತಜ್ಞರೆಂದುಕೊಳ್ಳುವ ಹಲವರ ಲೇಖನ ಡೈಜೆಸ್ಟುಗಳಲ್ಲಿ ಬರುತ್ತವೆ. ತಜ್ಞರೆಂದ ಮೇಲೆ ಒಬ್ಬರ ಅಭಿಪ್ರಾಯ ಇನ್ನೊಬ್ಬ ತಜ್ಞ ಒಪ್ಪುವುದಿಲ್ಲ ಆದ್ದರಿಂದ ಅಲ್ಲಿ ಬಂದದ್ದನ್ನೆಲ್ಲ ನಂಬಿ ಕೆಡಬೇಡ" ಎಂದು ಪದೇ ಪದೇ ಎಚ್ಚರಿಸಿದರು. ಸ್ನೇಹಿತರು. ಶಿಂಗ್ರಯ್ಯನನ್ನು.

ಅಮೇರಿಕದಲ್ಲಿ ಯಾವುದೋ ಒಂದು ಉದ್ಯಮ ಹೆಚ್ಚು ಲಾಭದಾಯಕವಾಯಿತು. ರಶ್ಯದಲ್ಲಿ ಯಾವುದೋ ಬೇಸಾಯ ಪದ್ಧತಿ ಹೆಚ್ಚು ಉತ್ಪತ್ತಿ ಕೊಟ್ಟಿತು. ಚೀಣಾದಲ್ಲಿ ಏನೋ ತಿಂದು ಬದುಕಿದರು ಎಂದ ಮಾತ್ರಕ್ಕೆ ಅದು ನಮಗೂ ಸಾಧ್ಯವಾಗಲೇಬೇಕೆಂದು ಹಿಂದೆ ಮುಂದೆ ನೋಡದೆ ಪ್ರತಿಪಾದಿಸುವ ಪ್ರಾಣಿ ನಮ್ಮ ಶಿಂಗ್ರಯ್ಯ. ಯಾಕೆ ಈತ ಅಂಗಡಿ ಬಾಗಿಲು ಮುಚ್ಚಿ ರಾಜಕೀಯಕ್ಕೆ ಇಳಿಯುವುದಿಲ್ಲ

ಎಂದು ಎಲ್ಲರಿಗೂ ಅನಿಸಿದ್ದುಂಟು. ಇವನ ಹುಚ್ಚಾಟಗಳಿಗೆ ರಾಜಕೀಯಕ್ಕಿಂತ ಉತ್ತಮ ರಂಗವಿದೆಯೇ ? ಆದರೆ ಶಿಂಗ್ರಯ್ಯ theory ಯಲ್ಲಿ ಮಾತ್ರ ಈಜಾಡು ವವನು. ಪ್ರಯೋಗದಲ್ಲಿ ಆಸ್ಥೆಯಿಲ್ಲ ಅವನಿಗೆ ಎಂದುಕೊಂಡಿದ್ದೆವು.

ಇಲ್ಲ ; ಪ್ರಯೋಗಕ್ಕೂ ಇಳಿದ ಈ ಸರ್ವಬಲ್ಲ ಭಟ್ಟರ ಮರಿ. ಯಾವುದೋ ಒಂದು ಡೈಜೆಸ್ಟಿನ ಮೂಲೆಯಲ್ಲಿ ಶಿಂಗ್ರಯ್ಯ ಓದಿದ ವೃತ್ತಾಂತ ಅವನ ಮನಸ್ಸನ್ನು ಬಹುವಾಗಿ ಹಿಡಿಯಿತು. ಇತ್ತ ಅವನ ಬೋರಿಂಗು ಸಹಿಸಲಾಗದೆ ಜನ ಅವನಲ್ಲಿಗೆ ವ್ಯಾಪಾರಕ್ಕೆ ಬರುವುದನ್ನೇ ಬಿಟ್ಟರು. ದೇಶದ ತುಂಬೆಲ್ಲ ವ್ಯಾಪಾರಿಗಳು ಕತ್ತಲಲ್ಲಿ ಕೂಡಿಟ್ಟು, ಬಚ್ಚಿಟ್ಟು ಯಾವು ಯಾವುದಕ್ಕೆ ಯಾವು ಯಾವುದನ್ನೋ ಬೆರಸಿ ಲಂಚ ಕೊಟ್ಟು ಟ್ಯಾಕ್ಸ್ ಕೊಡದೆ, ಅಳತೆಯಲ್ಲಿ ಕಡಮೆ ಕೊಟ್ಟು, ತಾರತಮ್ಯ ಮಾಡಿ ಹೇರಳ ಸಂಪತ್ತು ಗಳಿಸುತ್ತಿದ್ದರೆ ಈ ಮೂಢನೋ ಅವರ ಹಾದಿಯನ್ನು ಹಿಡಿಯದೆ ಸಿಕ್ಕ ಸಿಕ್ಕದ್ದನ್ನೆಲ್ಲ ಓದುವುದರಲ್ಲೇ ಕಾಲ ಕಳೆದು ಸಾಮಾನು ಸರಿಯಾಗಿ ತರಿಸದೆ. ಬಾಕಿ ವಸೂಲಿ ಮಾಡದೆ, ಇನ್ನೇನು ಅಂಗಡಿ ಮುಚ್ಚುತ್ತಾನಲ್ಲ ಎಂದು ಕನಿಕರಿಸುವ ಪರಿಸ್ಥಿತಿಯುಂಟಾಯಿತು.

ಆಗಲೇ ಶಿಂಗ್ರಯ್ಯ ಓದಿದ್ದು. ಅಮೇರಿಕದಲ್ಲಿ ಕಸಾಯಿ ಅಂಗಡಿಯವನೊಬ್ಬ ನಿಗೆ ಗಿರಾಕಿಗಳಿಂದ ವಸೂಲಾಗದೆ ಆತ ಅಂಗಡಿ ಮುಚ್ಚುವ ಸ್ಥಿತಿ ಬಂತು. ಆಗ ಆತ ಒಂದು ಉಪಾಯ ಹೂಡಿದ. ಕೊಟ್ಟ ಕಡ ವಸೂಲಿ ಆಗದೆ ವ್ಯಾಪಾರ ನಿಲ್ಲಿಸಬೇಕಾ ಗಿದೆ. ಬಾಕಿಯಿರುವವರ ಪಟ್ಟಿಯನ್ನು ಸದ್ಯದಲ್ಲೇ ಅಂಗಡಿಯೆದುರಿನ ಬೋರ್ಡಿನಲ್ಲಿ ಕಾಣಬಹುದು ಎಂದು ಹಾಗೆ ಬೋರ್ಡು ಹಾಕಿದ್ದೇ ತಡ. ವಸೂಲಿ ಕೊಡತಕ್ಕವರೆಲ್ಲ ನಾಮುಂದು ತಾಮುಂದು ಎಂದು ಓಡೋಡಿ ಬಂದು ಕಸಾಯಿ ಅಂಗಡಿಯವನಿಗೆ ಕೊಡತಕ್ಕದನ್ನೆಲ್ಲ ಕೊಟ್ಟು ಕೈ ತೊಳೆದುಕೊಂಡರಂತೆ. ವ್ಯಾಪಾರ ಮತ್ತೆ ಕುದುರಿತಂತೆ.

ತಾನೂ ಅದೇ ತಂತ್ರವನ್ನು ಬಳಸುತ್ತೇನೆಂದುಕೊಂಡ ಶಿಂಗ್ರಯ್ಯ ಆದರೆ ಅ ಸಮಾಚಾರ ಅಮೇರಿಕದ್ದು. ಈ ರಾಜೀವಪುರದಲ್ಲಿ ಹೇಗೋ ಎಂದು ಶಂಕೆ ತೋರಿಸಿದರು, ಶಿಂಗ್ರಯ್ಯ ಜಗ್ಗಲಿಲ್ಲ ಅಂಗಡಿ ಬಾಗಿಲು ಮುಚ್ಚಿ ವಸೂಲಿ ಬಾಕಿ ಯಿರುವವರ ಪಟ್ಟಿಯನ್ನು ಬೇಗನೆ ಪ್ರಕಟಿಸುತ್ತೇನೆಂದು ಬೋರ್ಡು ಹಾಕಿದ ಶಿಂಗ್ರಯ್ಯ. ಆದರೇನು ವಸೂಲಿ ಕೊಡಬೇಕಾದವರು ಅವನ ಬೋರ್ಡನ್ನು ಕಂಡು ನಕ್ಕು ಕೇಕೆ ಹಾಕಿ ಹೋದರೇ ವಿನಾ ಬಿಡುಗಾಸು ತೆರಲು ಮುಂದೆ ಬರಲಿಲ್ಲ. ಶಿಂಗ್ರಯ್ಯ ನದು ಹೊಸ ಮಾದರಿ ಎಂದರು ಜನ.

ಮುಂದೇನು ? ಬಾಕಿವಂತರ ಪಟ್ಟಿಯನ್ನು ಪ್ರಕಟಿಸುತ್ತೇನೆಂದು ಜಾಹೀರು ಮಾಡಿ ಸುಮ್ಮನಿರೋಕಾಗುತ್ತೆಯೇ ? ಪಟ್ಟಿಯನ್ನು ಬರೆಸಿ ಹಾಕುವುದೇ ಸರಿ ಎಂದು ಕೊಂಡು ಹಾಗೆಯೇ ಮಾಡಿದ ಶಿಂಗ್ರಯ್ಯ. ಆದರೆ ಆ ಪಟ್ಟಿ ಪ್ರದರ್ಶನವಾದ

ನಾಲ್ಕು ದಿನಗಳ ನಂತರ ಹೋಗಿ ನೋಡಿದರೆ ಪಟ್ಟಿಯೂ ಇಲ್ಲ. ಅಂಗಡಿಗಂತೂ ಬಾಗಿಲು. ಶಿಂಗ್ರಯ್ಯ ಆಸ್ಪತ್ರೆಯಲ್ಲಿದ್ದಾನೆಂದು ತಿಳಿಯಿತು.

ಸಮಾಚಾರವಷ್ಟೆ ; ಶಿಂಗ್ರಯ್ಯನ ಪಟ್ಟಿಯಲ್ಲಿ ಮೊತ್ತ ಮೊದಲು ಇದ್ದ ಹೆಸರು ಪೈ|| ರುದ್ರಯ್ಯನದು. ಅದು ಸಹಜವೇ, ರೂ. ೪೯೮-೪೫ ಬಾಕಿ ಕೊಡಬೇಕಿದ್ದು ಆತ ಪ್ರಥಮ ಸ್ಥಾನವನ್ನು ಪಡೆದಿದ್ದು ಆಶ್ಚರ್ಯವೇನಲ್ಲ. ಆದರೆ ರುದ್ರಯ್ಯ ಆ ಪಟ್ಟಿ ಪ್ರಕಟವಾದ ಸುದ್ದಿ ತಿಳಿದೊಡನೆ ಶಿಂಗ್ರಯ್ಯನ ಅಂಗಡಿ ಕಡೆಗೆ ಧಾವಿಸಿ ಬೋರ್ಡನ್ನು ಕಿತ್ತೊಗೆದು, ಪ್ರತಿಭಟಿಸಿದ ಶಿಂಗ್ರಯ್ಯನ ಮೊಳಕೈಯ ಮೂಳೆ ಮುರಿದಿದ್ದನಂತೆ.

ಪಾಪ, ಪ್ರಾಣಿ ಆಸ್ಪತ್ರೆಯಲ್ಲಿ ನರಳುತ್ತಿರುವವನನ್ನು ಹೋಗಿ ನೋಡಿದೆವು. ಶಿಂಗ್ರಯ್ಯ, ಇನ್ನಾದರೂ ಆ ಡೈಜೆಸ್ಟುಗಳಲ್ಲಿರುವುದನ್ನೆಲ್ಲ ನಂಬುವುದನ್ನು ಬಿಡು. ಎಲ್ಲಿಯೋ, ಯಾರೋ, ಏನೋ ಮಾಡಿದರೆಂದು ನೀನೂ ಮಾಡಿದೆ. ಪರಿಣಾಮ ಹೀಗಾಯಿತು. ಅಮೇರಿಕದಲ್ಲಿ ಸಾಲ ಕೊಟ್ಟವರೂ ಪಡಕೊಂಡವರೂ ನಡಕೊಳ್ಳುವ ರೀತಿ ಹಾಗಿರಬಹುದು. ನಮ್ಮ ಇಂಡ್ಯದಲ್ಲಿ ಹಾಗಿರಬೇಕೇ ? ಇಲ್ಲಿ ಸಾಲ ತಗೋಳ್ಳೋದು ರಾಷ್ಟ್ರೀಯ ಧ್ಯೇಯ ಅದರಲ್ಲಿ ಹೇಯವೇನಿಲ್ಲ. ಹಿಂದೆ ಕೊಡೋದಕ್ಕಿಲ್ಲದಾಗ ಕೊಡೋದಕ್ಕಿಲ್ಲ ಎಂದು ದಿಟ್ಟತನದಿಂದ ಹೇಳುವುದರಲ್ಲಿ ತಪ್ಪಿಲ್ಲವೆನ್ನುವವರು. ನಾವು ಮಾತ್ರವಲ್ಲದೆ ಅದು ನಮ್ಮ ಹೆಮ್ಮೆಯ ಹಕ್ಕು ಎಂದು ಸಹ ತಿಳಿದಿದ್ದೇವೆ, ಹೀಗಿರುವಾಗ ನೀನು ಬಾಕಿಯಿರುವವರ ಪಟ್ಟಿಯನ್ನು ಬಹಿರಂಗಪಡಿಸಿದರೆ ಹೀಗೆ ಸದ್ಯ ನೀನು ಆ ಡೈಜೆಸ್ಟುಗಳನ್ನು ನಂಬಬೇಡ ಎಂದು ಬುದ್ಧಿ ಹೇಳಿದರು ಮಿತ್ರರು,

ಆದರೆ ಶಿಂಗ್ರಯ್ಯನದು ಇದ್ದೇ ಇದೆಯಲ್ಲ " ನೋಡಿ ಈ ಡೈಜೆಸ್ಟಿನಲ್ಲದೆ—ಕೈ ಮುರಿದದನ್ನು ಸರಿಪಡಿದಲಾಗದಾಗ ಕೈಯನ್ನು ಛೇದಿಸಬೇಕಾಗುತ್ತಂತೆ ಆಗ ಪ್ಲಾಸ್ಟಿಕ್ ಕೈಯೇ ಗತಿಯಂತೆ ಎಂದು ರೋಧಿಸುತ್ತಾ ಎಡಗೈಯಿಂದ ಯಾವುದೋ ಡೈಜೆಸ್ಟನ್ನ ಮುಂದೆ ಮಾಡಿದ.

ಇದು " ನಾಯಿ ಬಾಲದ " ಸಮಾಚಾರ ತಾನೆ ?

—ರಾಮಿ

# ಇದು ಕೇಳಿದ್ದೀರಾ ?

★

ರಾಜೀವಪುರದ ರಂಗಯ್ಯ ಹೆಸರಾಂತ ಅರ್ಥಶಾಸ್ತ್ರಪ್ರವೀಣ. ಆತ ಬೆಂಗಳೂರಿಗೆ ಸೀರೆ ಕೊಳ್ಳಲು ಬಂದಿದ್ದ. ತೌರಿಗೆ ಹೋಗಿದ್ದ ಹೆಂಡತಿ ಬಾಣಂತನವನ್ನು ಮುಗಿಸಿ ಕೊಂಡು ತಾಯಿಯ ಜತೆಗೆ ರಾಜೀವಪುರಕ್ಕೆ ೮ನೇ ತಾರೀಖು ಬರುವುದಾಗಿ ತಿಳಿಸಿದ್ದಳು. ಅತ್ತೆಮ್ಮನವರಿಗೆ ಸೀರೆ ಕೊಂಡುಕೊಳ್ಳಬೇಡವೇ ? ಅದಕ್ಕೇ ಬೆಂಗಳೂರಿಗೆ ಬಂದಿದ್ದ. ಇಳಿದುಕೊಂಡಿದ್ದ ಹೋಟಲಿನಿಂದ ಸಂಜೆ ಮುಂದೆ ಟ್ಯಾಕ್ಸಿ ಮಾಡಿಕೊಂಡು ಸೀರೆ ಬಜಾರಿಗೆ ಹೋಗಯ್ಯಾ ಎಂದ. ಅರ್ಧ ದಾರೀಲಿ ಹಾಗೇ ಜೇಬು ತಡವರಿಸಿದ. ಹಣದ ಪರ್ಸೇ ಇಲ್ಲ. ಅಂದ ಮೇಲೆ ?

“ಟ್ಯಾಕ್ಸಿ ಡ್ರೈವರ! ಸ್ವಲ್ಪ ಗಾಡಿ ನಿಲ್ಲಿಸು, ಎದುರು ಅಂಗಡಿಯಲ್ಲಿ ಒಂದು ಕಡ್ಡಿ ಪೆಟ್ಟಿಗೆ ಕೊಂಡು ತರ್‍ತೀನಿ. ಇಲ್ಲೇಲ್ಲೋ ಹತ್ತು ರೂಪಾಯಿನ ನೋಟು ಬಿದ್ದು ಹೋಗಿದೆ. ಹುಡುಕಬೇಕು” ಎಂದ.

ಟ್ಯಾಕ್ಸಿ ನಿಂತಿತು. ರಂಗಯ್ಯ ಎದುರು ಅಂಗಡಿಗೆ ಹೋಗುವ ಹೊತ್ತಿಗೆ ಭರ್‍ರಂತ ಟ್ಯಾಕ್ಸಿ ಮುಂದಕ್ಕೆ ಓಡಿ ಹೋಯಿತು.

ಇನ್ನು ಸ್ವಲ್ಪ ದೂರ ನಡೆದರೆ ಸೀರೆ ಅಂಗಡಿ ಸಿಗುತ್ತೆ–ಟ್ಯಾಕ್ಸಿ ಬಾಡಿಗೆ ಉಳೀತಲ್ಲ : ಅದಕ್ಕಿಂತ ಹೆಚ್ಚಾಗಿ ಟ್ಯಾಕ್ಸಿಯವನ ಹತ್ತಿರ ಜಗಳ ಕಾಯೋದು ತಪ್ಪಿತಲ್ಲ ! ಎಂದು ಅರ್ಥಶಾಸ್ತ್ರ ಪಂಡಿತ ತನ್ನಲ್ಲಿ ತಾನೇ ನಕ್ಕ.

* * * *

ಋಷ್ಯಶೃಂಗರನ್ನು ಕರೆದು ತರಬೇಕು ಎಂದು ಅಪ್ಪಣೆಯನ್ನಿತ್ತಾಗ ಬಾಲ ಸನ್ಯಾಸಿಗಳ ಉಡುಪು ಧರಿಸಿ ಅಪ್ಸರೆಯರು ದಿಗ್ವಿಜಯಕ್ಕೆ ಹೊರಟುದನ್ನು ಕೇಳಿದ್ದೀರಿ. ಹಾವಭಾವ ವಿಲಾಸಗಳಿಂದ, ದುಂಡು ದುಂಡು ನೃತ್ಯ ನಾಚಿಕೆಗಳಿಂದ ತುಂಬು ಪಯೋಧರಿಯೊಬ್ಬಳು ಋಷ್ಯಶೃಂಗರನ್ನು ಅಲಾಯಿದಾ ಸೆಳೆದುಕೊಂಡು ತಪೋವನ ದುಂಬಿನ ಕೊಳದ ಬಳಿಗೆ ಹೋದಳು.

ಭಜನೆ ಗೀತವನ್ನು ಹಾಡುತ್ತಾ ತುಂಬು ಪಯೋದರಿಯು ಕುಳಿತಳು. ಋಷ್ಯಶೃಂಗರು ಹಾಗೆಯೇ ಆಕೆಯನ್ನು ಒರಗಿಕೊಂಡು ಕುಳಿತರು.

ತಲೆಗೆ ಹಿತವಾಗಿತ್ತು. ಅವ್ಯಕ್ತವಾದ ಯಾವುದೋ ಆನಂದ ಅವರನ್ನು ಆವರಿಸಿತು. ತುಟಿ ತೆರೆಯಿತು. ಹೃದಯಾಂತರಾಳದ ಮಾತುಗಳು ಹೊರಬಿದ್ದುವು.

" ಪಯೋಧರೆ ! ಹಿಂದೊಮ್ಮೆ ನನ್ನ ಬಾಳಿನಲ್ಲಿ ಇಂತಹ ಆನಂದವನ್ನು ಅನುಭವಿಸಿದ್ದೆ " ಎಂದರು ಋಷ್ಯಶೃಂಗರು.

" ಎಂದು ?" ಎಂದಳು ತುಂಬು ಪಯೋಧರೆ,

" ಬಾಲ್ಯದಲ್ಲಿ ಆಶ್ರಮದಲ್ಲಿ ಮಲಗಿದ್ದಾಗ ಎರಡು ಕುಂಬಳಕಾಯಿಗಳನ್ನು ತಲೆದಿಂಬು ಮಾಡಿಕೊಂಡು ಮಲಗಿದ್ದೆ. ಆಗಲೂ ಇದೇ ತರಹ ಆಯಿತು" ಎಂದರು ಋಷ್ಯಶೃಂಗರು.

ಇನ್ನೂ ತುಂಬ ಶ್ರಮ ಪಡಬೇಕು ಎಂದು ನಿಟ್ಟುಸಿರು ಬಿಟ್ಟಳು, ತುಂಬು ಪಯೋಧರೆ.

* * * *

ಭಜನೆಯನ್ನು ಶುರು ಮಾಡುವುದಕ್ಕೆ ಮುಂಚೆ, ಸೇರಿದ್ದವರೆಲ್ಲರೂ ಕಡಾಯಿಯ ಬಳಿಗೆ ಹೋಗಿ ಒಂದೊಂದು ಲೋಟ ಪಾನಕವನ್ನು ಸೇವಿಸಿದರು. ಆಶ್ರಮದ ವ್ಯವಸ್ಥಾಪಕರು " ಭಜನೆ ಮಾಡುವವರ ಗಂಟಲು ಬಿಡಲಿ " ಎಂದು ಪಾನಕಕ್ಕೆ ಹದವಾಗಿ ಸಾರಾಯಿಯನ್ನು ಸೇರಿಸಿದ್ದರು. ವಾಸನೆ ಕಡಮೆಯಾಗಲಿ ಅಂತ ಪಚ್ಚ ಕರ್ಪೂರ ಹಾಕಿದ್ದರು.

ಎಲ್ಲರೂ ಕುಡಿದಮೇಲೆ ಭಜನೆಗೆ ಪ್ರಾರಂಭವಾಯಿತು.

ಬಲು ಹಿತವಾಗಿ ಭಜನೆ ನಡೆಯುತ್ತಿತ್ತು. ಕಿವಿಗೆ ಇಂಪಾಗಿತ್ತು. ಆಗ ಊರ ಪುರೋಹಿತರು ಅತ್ತಕಡೆ ಬಂದರು ಭಜನೆಯನ್ನು ಕೇಳಿ ಅಲ್ಲಿಗೆ ಬಂದರು. ಊರ ಅಂಚಿನ ನಿವಾಸಿಗಳು ಭಜನೆ ಮಾಡುತ್ತಿದ್ದುದನ್ನು ಕಂಡು ತುಂಬ ಸಂತೋಷ ಪಟ್ಟರು. ಪುರೋಹಿತರನ್ನು ಕಂಡ ಭಜನೆಗಾರರ ಮುಖಂಡ ಹಾಗೂ ಆಶ್ರಮದ ವ್ಯವಸ್ಥಾಪಕರು ಮುಂದೆ ಬಂದು " ಸ್ವಾಗತ, ಪುರೋಹಿತರಿಗೆ ! ನೀವು ಬಂದುದು ನಮ್ಮ ಪುಣ್ಯ. ಭಜನೆಯಲ್ಲಿ ನೀವೂ ಭಾಗವಹಿಸಬೇಕು. " ಎಂದು ವಿನಂತಿಸಿಕೊಂಡರು. " ಆಗಲಿ " ಎಂದು ಒಪ್ಪಿದರು ಪುರೋಹಿತರು. ಇದನ್ನು ಕೇಳಿದ ಕೂಡಲೆ ಭಜನೆಕಾರನೊಬ್ಬ, ಕಡಾಯಿ ಬಳಿಗೆ ಓಡಿ ಒಂದು ಲೋಟಾ ಪಾನಕವನ್ನು ತಂದು ಪುರೋಹಿತರ ಎದುರಿಗೆ ಇಟ್ಟ. ಆಶ್ರಮದ ವ್ಯವಸ್ಥಾಪಕರು ತಲೆ ಕೆರೆದುಕೊಂಡರು. ಯಾಕೆ ಹೀಗಾಯ್ತಲ್ಲ ಅಂತ. ಪುರೋಹಿತರು ಒಂದು ಗುಟುಕು ಕುಡಿದರು. ಲೋಟಾ ಖಾಲಿ ಮಾಡಿದರು.

" ಇದೆಂತದಯ್ಯಾ ? ಪಾನಕ " ಎಂದು ಉದ್ಗಾರ ತೆಗೆದರು.

" ಬರೀ ಎಳನೀರು, ಪುರೋಹಿತರೇ ?" ಎಂದರು ವ್ಯವಸ್ಥಾಪಕರು.

" ಅದೆಂತ ತೆಂಗಿನ ಮರವಯ್ಯಾ ? ಇಂತಹ ಎಳನೀರು ಬಿಡುತ್ತೆ ?" ಎಂದರು ಪುರೋಹಿತರು.

" ಪಚ್ಚ ಕರ್ಪೂರದ ಗೊಬ್ಬರ ಹಾಕಿದರೆ. ಹೀಗಾಗುತ್ತೆ " ಎಂದರು ವ್ಯವಸ್ಥಾಪಕರು.

ಭಜನೆ ಪುರೋಹಿತರ ನೇತೃತ್ವದಲ್ಲಿ ಸಾಂಗವಾಗಿ ನಡೆಯಿತು.

* * * *

" ಅರ್ಥ ಸಚಿವನಾಗಿದ್ದರೆ, ನಿರುದ್ಯೋಗಿಗಳ ಸಮಸ್ಯೆಯನ್ನು ಬಲು ಬೇಗ ಬಿಡಿಸುತ್ತಿದ್ದೆ " ಎಂದು ಜಂಭ ಕೊಚ್ಚಿಕೊಂಡ ಅರವಾಮೊದ್ದು.

" ಅದು ಹೇಗೋ ? ಅಂತಂತ ಘಟಾನುಘಟಿಗಳಿಗೇ ಆಗಿಲ್ಲ " ಎಂದ ಸಾಮಿ.

" ಎರಡು ದ್ವೀಪಗಳನ್ನು ಬಾಡಿಗೆಗೆ ಕೊಂಡು, ಒಂದರಮೇಲೆ ಎಲ್ಲ ಗಂಡಸರನ್ನು ಇರಿಸಿ, ಇನ್ನೊಂದು ದ್ವೀಪದ ಮೇಲೆ ಹೆಂಗಸರೆಲ್ಲರನ್ನೂ ಇರಿಸುತ್ತಿದ್ದೆ " ಎಂದ ಅರವಾಮೊದ್ದು.

" ಏನಾದ ಹಾಗೆ ಅಯ್ಯು ? ನಿರುದ್ಯೋಗ ಹೆಚ್ಚಾಗುತ್ತೆ " ಎಂದ ಸಾಮಿ.

" ತಿಳೀಲಿಲ್ಲವೇ ? ಹಾಗೆ ಮಾಡಿದರೆ ಆನಂತರ ಎಲ್ಲರೂ ದೋಣಿಗಳನ್ನು ತಯಾರಿಸುವ ಕೆಲಸದಲ್ಲಿ ಮುಳುಗುತ್ತಾರೆ !" ಎಂದ ಅರವಾಮೊದ್ದು.

---

ಸಿಕ್ಕಿಂ ಆಚೆ ಚೀಣೀ ಪ್ರದೇಶದಲ್ಲಿ ಇದ್ದುವೆಂದು ಹೇಳಲಾಗಿದ್ದ ಕಾವಲು ಠಾಣ್ಯಗಳು ಈಗ ಮಾಯವಾಗಿವೆಯಂತೆ.

—ಭಾರತೀಯರ ಜಾದು ಇದು ಎಂದು ಚೀಣಾ ಇನ್ನೂ ಹೇಳಿಲ್ಲವಂತೆ.

* * * *

ಮೊದಲೆಲ್ಲ ಸಾವಿರ ರೂಪಾಯಿ ವರದಕ್ಷಿಣೆ ಕೊಟ್ಟರೆ ಅಳಿಯ ಸಿಕ್ಕುತ್ತಿದ್ದ ಎಂದೊಬ್ಬರ ಅಂಬೋಣ.

—ಈಗಿನ ಕಾಲದಲ್ಲಿ ಸಾವಿರ ರೂಪಾಯಿಗೆ ಗಿಳಿಯ ಕೂಡ ಸಿಕ್ಕಲ್ಲ.

# ರಕ್ತ ತರ್ಪಣ

★

ಗಾಂಪರೊಡೆಯರು ಮಠದ ಉಪನ್ಯಾಸ ಶಾಲೆಯಲ್ಲಿ (ಹಿಂದೆ ಇದು ಉಪನ್ಯಾಸ ಶಾಲೆ ಆಗಿತ್ತು) ತರ್ಪಣ ಬಿಡುತ್ತಿದ್ದರು. ಶಿಷ್ಯರುಗಳೆಲ್ಲಾ ತೇವಗಣ್ಣಿನಿಂದ ಸುತ್ತಲೂ ನಿಂತುಕೊಂಡಿದ್ದರು. ಮಠದಲ್ಲಿ ಸ್ಮಶಾನ ಮೌನ ಆವರಿಸಿತ್ತು. ನೋಡಿದವರು ಗುರುಗಳ ಮುಖ ದಿಟ್ಟಿಸಿದ್ದರೆ ಇದೇನು ಅವರ ಹೆಣಕ್ಕೆ ಅವರೇ ತರ್ಪಣ ಬಿಟ್ಟುಕೊಳ್ಳುತ್ತಿರುವರೆ! ಎಂಬ ಭ್ರಮೆಯನ್ನು ಹುಟ್ಟಿಸುತ್ತಿತ್ತು. ಅವರ ಮುಖದಲ್ಲಿಯೇ ಪ್ರೇತರಾಜಕಳೆ ಮೂಡಿತ್ತು,

ಆಗತಾನೆ ನಾನು ಮಠದಲ್ಲಿ ಕಾಲಿಕ್ಕಿದ್ದು ಈ ದೃಶ್ಯ ಕಂಡಾಗ ದುಃಖ ಉಮ್ಮಳಿಸಿ ಬಂತು. ನನ್ನ ಕಣ್ಣೂ ತೇವವಾಯಿತು. ನನ್ನ ದುಃಖದ ಮುಖ ನೋಡಿ ಮಂಕನು ಗಟ್ಟಿಯಾಗಿ ಅತ್ತೇಬಿಟ್ಟ. ಅವನನ್ನು ನೋಡಿ ಮರುಳ ಬಿಕ್ಕಿದ. ಮಂಕ ಮರುಳರ ಅಳು ಮಡ್ಡಿ ಮಂಡೆಯರೂ ಅಳುವಂತೆ ಮಾಡಿತು. ಎಲ್ಲರೂ ಅಳುವಾಗ ತಾವೇಕೆ ಸುಮ್ಮನಿರಬೇಕೆಂದು ಸ್ವಯಂ ಗುರುಗಳೂ ಸ್ವರ ಸೇರಿಸಿ, ಸಾಮೂಹಿಕ 'ಬುಬ್ಡಿ ಸೇವಾಮುಧಾರಯಾ'ಕ್ಕೆ 'ಹರಿ ಓಂ ಸ್ವಸ್ತಿ' ಎಂಬುವವರೂ ಇಲ್ಲದೆ ಇಡೀ ಮಠವೇ ಅತ್ತಿತು.

"ಇದೇನು ಗುರುಗಳೇ ಯಾಕೆ ಈ ಅಳು ?"

—ಎಂದು ಸಮಾಧಾನ ಮಾಡುತ್ತಾ ಕೇಳಿದೆ. ಗುರುಗಳು ಅಳು ನಿಲ್ಲಿಸಿ ಶಿಷ್ಯರನ್ನು ನೋಡಿದರು. ಗುರುಗಳು ಅಳು ನಿಲ್ಲಿಸಿದ್ದು ಕಂಡ ಶಿಷ್ಯರೂ ಸುಮ್ಮನಾದರು. ನಾನು ಈ ಚಮತ್ಕಾರ ನೋಡಿ ನಕ್ಕೆ. ಮಠವೇ ನಕ್ಕಿತು.

"ಗಾಂಪರ ಮಠವೆಂದರೆ ಹೀಗಿರಬೇಕಲ್ಲವೇ. ಯಾರೋ ಅತ್ತರು ನೀವೂ ಅತ್ತಿರಿ . ಎಲ್ಲರೂ ನಕ್ಕರು ನೀವೂ ಹಲ್ಲು ಕಿರಿದಿರಿ......ಈ ಅಳು--ನಗುವಿನ ಅರ್ಥವೇನು ? ಗುರುಗಳೇ .." ಎಂದು ಕೇಳಿದೆ.

"ಅಯ್ಯಾ ನಗೆಸಾಹಿತಿ ಅಂತ ಅಂದ್ಕೊಂಡಿರೋ ದಾಶರಥೀ ಈ ಹೊತ್ತಿಗೆ ವಿಷಯ ತಿಳ್ಕೊಂಡಿದ್ದೀಯಾಂತ ಇದ್ದೆವು...ನೀನು ಕೇವಲ ಕುಹುಕಿ ಅಷ್ಟೆ. ಅಳು !! ನಾವು ಯಾಕೆ ಅತ್ತೆವು ?"

"ನಾನು ಬಂದಾಗ ತಾವು ತರ್ಪಣಬಿಡ್ತಿದ್ರೀ ಮುಖದಲ್ಲಿ ಪ್ರೇತರಾಜಕಳೆ ಇತ್ತು.. ತಾವೇ ಸತ್ತವರಂತೆ ಶೋಭಿಸಿದಿರಿ—ಆದಕ್ಕೆ ನಾನು ಕಣ್ಣೊರಸಿಕೊಂಡೆ..."

"ನಿನ್ನ ನೋಡಿ ಈ ಶಿಷ್ಯರು ಅತ್ತರು."

"ಹೌದು, ಯಾತಕ್ಕೇಂತ..."

"ನೀನು ಸತ್ತಿರುವಾಗ ಇವರುಗಳು ನಗಬೇಕೇ ಅಳಬೇಕೆ ?"

—ಎಲಾ ಗಂಗ್ಗುರುವೇ! ಸತ್ತವರಂತೆ ಶೋಭಿಸಿದವರು ಈ ಗುರುಶಿಷ್ಯರು ನನಗೇ ಅಮರಿಕೊಂಡರಲ್ಲಾ...

"ಗುರುಗಳೇ ನಾನು ಸತ್ತಿದ್ದನೆ! ಎಂಥಾ ಮಾತು..."

"ನಿಮ್ಮಂಥವರು ಬದುಕಿದ್ದರೂ ಒಂದೇ ಸತ್ತಿದ್ದರೂ ಒಂದೇ..."

"ಇದೇನು ಗಾಂಪ ಗುರುವೇ ನಾನಿರುವ ಹೊತ್ತಿಗೇ ನಿಮ್ಮ ಪ್ರಚಂಡ ವಿದೇಶ ಯಾತ್ರೆ ಕಥೆ ಬರೆದೆ. ನಾನು ಇರುವುದರಿಂದಲೇ ನಿಮ್ಮ ಮಠಕ್ಕೆ ಒಂದು ಪ್ರಚಾರ ಸಿಕ್ಕಿರುವುದು. ನಾನು ಇರುವುದರಿಂದಲೇ ೯೯..."

—ಎಂದು ಏನೋ ಹೇಳಲು ತೊಡಗುತ್ತಿದ್ದಂತೆಯೇ ಮಧ್ಯೆ ಗುರುಗಳು ಬಾಯಿಬಡಿದರು,

"ಹೌದು ನೀನು ಇರುವುದರಿಂದಲೇ ನಾವು ಇರುವುದು. ನಿನ್ನ ದೆಸೆಯಿಂದಲೇ ಮಠದ ಬಾವುಟ ಹಾರಾಡುತ್ತಿರುವುದು, ನಿನ್ನ ಬರಹದಿಂದಲೇ ನಮ್ಮ ಮಠದ ನಗಾರಿ ಮೊಳಗುತ್ತಿರುವುದು. ಕಹಳೆ ಊದುತ್ತಿರುವುದು. ನಮ್ಮ ಕಾವಿ ಬಟ್ಟೆಯ ಬಣ್ಣ ಹೊಳೆಯುತ್ತಿರುವುದು...ನೀನು ನೀನು ನೀನು—ನೀನು...ನಿನ್ನ ಯೋಗ್ಯತೆಗೆ ಬೆಂಕಿ ಇಕ್ಕ—ನೀನಂತೆ ನೀನು...ನೀನು ಇರೋದರಿಂದ ನಮ್ಮ ಮಠ ಇದೆಯೋ ಅಥವ ನಮ್ಮ ಮಠ ಇರೋದರಿಂದ ನೀವುಗಳು ಇದ್ದೀರೋ? ಇಂತಹ 'ಅಹಂ' ಇರೋರು ಇದ್ದರೂ ಸತ್ತಂತೇನೇ ನಮ್ಮ ಲೆಕ್ಕದಲ್ಲಿ..."

ಮುಟ್ಟಿನೋಡಿಕೊಳ್ಳುವಂತೆ ಚಬಕದಿಂದ ಬಾರಿಸಿದಂತೆ ತೀಡಿ ಬಾಯಿ ತೀಟೆ ತೀರಿಸಿಕೊಂಡಿದ್ದರು. ನಾನು ಈ ಸನ್ಯಾಸಿಯನ್ನು ತಡವಿ ಬಾಯಿ ಬಾಯಿ ಬಿಡ ತೊಡಗಿದ್ದೆ, ನನ್ನ ಅಹಂ ಇಳಿಸಲಿಕ್ಕೇ ಅವರು ಈ ರೀತಿ ತರಾಟೆಗೆ ತೊಗೊಂಡಿದ್ದರೆ!!

"ಅಲ್ಲ ಗುರುಗಳೇ ೯...ಅದಕ್ಕಲ್ಲಾ...ಮತ್ತೇ ೯ ನನ್ನ ಅಭಿಪ್ರಾಯ ಏನೂಂತ ಅಂದ್ರೆ...ಮತ್ತೇ ೯..."

"ಮತ್ತೇನೂ ನೀನು ತೊದಲಬೇಕಿಲ್ಲ...ಪ್ರಸಾದ ಬೇಕಿದ್ದರೆ ಇನ್ನೂ ಒಂದು ಹಿಡಿ ತೊಗೋ ..ಆಶೀರ್ವಾದ ಬೇಕಾದರೆ ತೊಕೋ. ತೀರ್ಥ ಬೇಕೇ ಹಿಡಿ... ಆದರೆ ನಿನ್ನಿಂದಾನೇ ನಾವು ಇರೋದೂಂದ್ರೆ ಒಪ್ಪಲ್ಲ. ನಮ್ಮ ಮಠ ಇರೋದ ರಿಂದ್ಲೇ ನಿನಗೂ ಕೊಂಚ ಪ್ರಚಾರ ಸಿಕ್ಕಿದೇಂತ ಒಪ್ಕೊ...ನನ್ನ ಸತ್ತ ಮುಖ ನೋಡಿ ಅತ್ತನಂತೆ ಶ್ಯಾಣ್ಯಾ...ನಾನ್ಯಾಕೆ ಅಳ್ತಿದ್ದೆ! ನಾನು ಯಾರಿಗೆ ತರ್ಪಣಬಿಟ್ಟಿದ್ದು ಗೊತ್ತೇ..."

"ತಿಳೀದು ಗುರುವೇ..."

ಒಪ್ಕೋ ನಿನಗೆ ಏನೇನೂ ತಿಳೀದೂಂತ ... ತಿಳ್ಕೊ ಈಗಾದರೂ...ನಮ್ಮ ಈ ಧರ್ಮಯುದ್ಧದಲ್ಲಿ ಮಡಿದ ಯೋಧರಿಗೆ ನಾನು ತೀರಿಸೋ ಕೃತಜ್ಞತೆ ಇದೇನು ...ಅವರ ಆತ್ಮ ಶಾಂತವಾಗಲೀಂತ ಅವರುಗಳಿಗೆ ತರ್ಪಣ ಬಿಡ್ತಿದ್ದೆ...ಆ ಪಾಕಿಸ್ತಾನಿ ಸೈತಾನರ ಗುಂಡಿಗೆ ಸಿಕ್ಕ ನಮ್ಮ ಸೈನಿಕರ ರಕ್ತತರ್ಪಣಕ್ಕೆ ಈ ತರ್ಪಣ ಕೊಡ್ತಿರೋದು

...ನಮ್ಮೂರ ಹೈದರೇ ಕಟ್ಟಿದ ನ್ಯಾಟಿನಿಂದ ಜಗಜಟ್ಟಿ ಹಾರೋಪ್ಲೇನೂಂತ ಎಗರ ಲಾಡಿದ ಸಾಬರ ಜುಟ್ಟು ಅಲ್ಲಾಡಿ ಹೋಯ್ತಲ್ಲ...ಅದೆಂಥ ಟ್ಯಾಂಕು ಅದು .. ಅಮೇರಿಕಾದವರು ಚಕ್ರಬಿಂಬನಕೋಟಿ ಇದು ಅಂತ ಕೊಟ್ಟಿದ್ರಂತಲ್ಲ!..."

"ಅದೇ ಪಟ್ಟೋನ್ ಟ್ಯಾಂಕುಗಳೂ .."

"ಪೆಟ್ಟೋನ್ ನಂಬಿದ ಆ ಅಯೂಬ ಕೆಟ್ಟನ್ .ಭುಟ್ಟೋನ್ ನಂಬಿದವರನ್ನ ನಮ್ಮವರು ಬಿಟ್ಟಾರೇನ್..."

"ಗುರುಗಳೇ ಇದೊಂದು ಸೊಗಸಾದ ಆಶುಕವಿತೆ, ಆ ಹ ಹ...ಏನು ಪ್ರಾಸ ಪ್ರಾಸ...ಗುರುಗಳೇ...

ಪೆಟ್ಟೋನ್‌ನಂಬಿ ಅಯೂಬ್ ಕೆಟ್ಟನ್
ಬಿಟ್ಟಾರೇನ್ ನಮ್ಮವರು ಆ ಭುಟ್ಟೋನ್ ॥

...ಈ ರೀತಿ ಸ್ವಲ್ಪ ಪದಗಳನ್ನ ಅದ್ಲು ಒದ್ಲುಮಾಡಿ ಬರೆದುಬಿಟ್ರೆ ಆಯ್ತು."

"ಅಷ್ಟೆ...ಅಲ್ಲ ಸಿಯಾಲ್ ಕೋಟೆ ಸಮರದಲ್ಲಿ ಕೋವಿ ಹಿಡಿದು ಬಿಸಿಲು ಮಳೆ ಗಾಳಿ—ವೈರಿಯ ದಂಡು ಮೇಲೆ ವಿಮಾನ ಗುಂಡು...ನಮ್ಮ ಗಂಡುಗಲಿಗಳು ಜೀವದ ಹಂಗುಬಿಟ್ಟು ನಮ್ಮ ದೇಶಕ್ಕೆ ರಕ್ತಾರ್ಪಣ ಕೊಡುವಾಗ ನೀನು ಪ್ರಾಸ ಪದ್ಯ ಅಂತ ಪರದಾಡ್ತಿರೋದು ನೋಡಿ, ಅಯ್ಯೋ ಪಾಪ 'ಎಳೆನಿಂಬೆ' ಅಂತ ಅನ್ನಲೇ ಬೇಕಾಗಿದೆ..."

"ಗುರುಗಳೇ ನಿಮ್ಮ ಇವತ್ತಿನ ಈ ಮಾತುಗಳು ಸಾಹಿತ್ಯದ ಅಣಿಮುತ್ತು, ಎಂತಹ ವೀರ ಕವನ ಬರೆದು ರೇಡಿಯೋದವರಿಂದ ದುಡ್ಡು ಕಸಿಯುವ ಕವಿಯೂ ನಾಚಬೇಕು .ಆ ಹ ಹ...ಗಾಂಪರೊಡೆಯರೇ ನಿಮ್ಮವೇ ಈ ವಾಣಿಯನ್ನ ಈ ರೀತಿ ಯಲ್ಲಿ ಕೊಂಚ ಬದಲಿಸಿ ಬರೆದುಬಿಡ್ತೀನಿ...

ಅಲ್ಲಿ ಆ ಸಿಯಾಲು ಕೋಟೆಯ ಕಣಿವೆಯಲಿ
ಕೋವಿ ಹಿಡಿದಿಹ ನೋಡು ವೈರಿಯ ಬಡಿವ ಸಮರದಲಿ ।
ಎಡಬಲಕೆ ವೈರಿದಂಡು
ಮೇಲೆ ವಿಮಾನಗುಂಡು
ನುಗ್ಗಿಹನು ನಮ ಗಂಡು
ನೋಡು ನೋಡು ॥

ಈ ರೀತಿ ಒಂದು ಪದ ಜೋಡಣೆ ಮಾಡಿಕೊಂಡು ಬಿಟ್ರೆ ಒಂದು ವೀರಕವನ ರೆಡಿ..."

"...ಆ ವೀರ ಕವನ ನೀನು ಮಾರಿಕೊಂಡು ನಮಗೆ ಬರೇ ಭಕ್ತಿಯ ನಮಸ್ಕಾರ ಹಾಕಿದರೆ ಗೆದ್ದಿ...ಅಂತೂ ಬಡಗಾಂಪರಿಗೆ ಅಂದರೆ ನಮ್ಮಂಥವರ ಶೋಷಣೆಯಲ್ಲಿಯೇ ನಿಮ್ಮ ಜೀವನ ಆಗಬೇಕಲ್ಲವೆ! ಆಯ್ತು ಇದರಿಂದ ನಮ್ಮ ಮರದ ಔದಾರ್ಯದ ಶ್ರೀಮಂತಿಕೆ ಹೆಚ್ಚುತ್ತಲ್ಲದೆ ಮತ್ತೇನೂ ಇಲ್ಲ...ಆಗ್ಲಿ ಬದುಕಿಕೋ. ನಮ್ಮ ಹೆಸರು ಹೇಳಿಕೊಂಡು ಬದುಕಿಕೊ..."

—ಗಾಂಪರೊಡೆಯರು ನಮಸ್ಕಾರಮಾಡಿದ ನನ್ನ ತಲೆ ಮೇಲೆ ತರ್ಪಣಕ್ಕೆ ಇಟ್ಟುಕೊಂಡಿದ್ದ ಎಳ್ಳನ್ನೇ ಹಾಕಿದರು. ನಿಟ್ಟುಸಿರುಬಿಟ್ಟು ಆಕಾಶ ನೋಡಿದರು. ಆಳವಾಗಿ ಮತ್ತೆ ನನ್ನ ನೋಡಿದರು...

"ಎಲೈ ಭಡವ ಕುಹಕ ಸಾಹಿತಿಯೇ—ರಾಷ್ಟ್ರೀಯ ರಕ್ಷಣಾ ನಿಧಿಗೆ ಇದನ್ನು ಕೊಡು" ಎಂದು ಸೊಂಟದಿಂದ ತೆಗೆದ ನಾಲ್ಕು ಪಾವಲಿಗಳನ್ನು ನನ್ನ ಕೈಗೆ ಹಾಕಿದರು....

"ಗೆಳೆಯಾ...ನಮ್ಮಂತಹ ಗಾಂಪಬಡವರೇ ದೇಶದಾದ್ಯಂತ ತುಂಬಿರುವ ಈ ನಾಡಿನ ಗಡಿಯಲ್ಲಿ ಪಾಕಿಸ್ತಾನಿಗಳು ಸತಾಯಿಸ್ತಾ ಇದ್ದಾರೆ, ನಮ್ಮ ಸ್ವಾತಂತ್ರ್ಯ ದಿಂದ ಗರಿಕಟ್ಟಿಕೊಂಡು ಪುಢಾರಿಗಳ ಕೇಕೆ—ಮಾರ್ವಾಡಿಗಳ ಬಡ್ಡಿ—ಭ್ರಷ್ಟಾಚಾರ ಭರಿತ ದೇಶಭಕ್ತರು—ಶರಾವತಿಯಂತಹ ವಿದ್ಯುತ್ ಷಾಕಿನ ಕೆಲಸಗಳು—ಬಡವರನ್ನು ಹೆಚ್ಚು ಬಡವರನ್ನಾಗಿಯೂ—ಶ್ರೀಮಂತರನ್ನು ಮಂತರ್‍ನ್ನ ಹೆಚ್ಚು ಶ್ರೀಮಂತರನ್ನಾ ಗಿಯೂ ಮಾಡುತ್ತಾ ನಮ್ಮದಿಯಾದ ಭವ್ಯ ಭಾರತವನ್ನು ಕಟ್ಟುತ್ತಿದ್ದೇವೆಂಬ ಭ್ರಮೆ ಹೊತ್ತು ಟೋಪಿ ಸೊಟ್ಟಮಾಡಿಕೊಂಡು ಭಾಷಣಾಬಿಗಿದವರು, ಈ ಪಾಕಿಸ್ತಾನಿಗಳ ಆಕ್ರಮಣದಿಂದ ಎಚ್ಚರಗೊಳ್ಳಬೇಕು...ಎಲೈ ಕಂತ್ರಿ ಕುಬೋದ್ಯಿಯೇ ತಿಳ್ಕೊ ಈಗ ಲಾದರೂ—ನಮ್ಮ ಶಕ್ತಿ ಎಂಥಾದ್ದೂಂತ.. ಬರೇ ಹಿಂಗೇ ಟ್ಯಾಕ್ಸು—ಮಾತು— ಭರವಸೇನೇ ಶಾನೆ ದಿನ ನಡಸ್ತಾ ಇರೋಕೆ ಆಗಲ್ಲ...ಸೈನ್ಯದ ಬಲ ಹೆಚ್ಚಾದಾಗ ಆಳುವವರು ಹುಷಾರಾಗಿರಬೇಕು ..ಇಲ್ಲೂ ಒಬ್ಬ ಅಯೂಬನೇ ಬಂದು ಅಮರಿ ಕೊಂಡಾನು...ಆದ್ದರಿಂದ ಈ ಯುದ್ಧದಿಂದ ನೀವುಗಳು ತಿಳ್ಕೊಬೇಕಾಗಿರೋದು ಏನು ಗೊತ್ತೆ? ಈಗಿರೋ ಶ್ರೀಮಂತರೂ—ಜಮೀನ್‌ದಾರರೂ—ಮಂಡಿ ಪ್ಯಾಟೆ ಯವರೂ ದುಡ್ಡುಮಾಡಿದ್ದು ಸಾಕು ..ಸಾಮಾನ್ಯ ರೈತ—ಫ್ಯಾಕ್ಟರಿ ಕೆಲಸಗಾರ— ಇಂತಹ ಬಡವರ ಯೋಗಕ್ಷೇಮಕ್ಕೆ ಗಮನಕೊಡಿ. ಅಂದರೇ ನೀವುಗಳು ಈ ಡೆಮಾ ಕ್ರಸಿ ಉಳಿಸಿಕೊಂಡು ಹೋಗೋದು ಸಾಧ್ಯ.. ಹಿರಿ ಓಂ ಸುಸ್ತು..."

—ಎಂದು ಗುರುಗಳು ನಾನೇ ಈ ಅನರ್ಥಕ್ಕೆಲ್ಲಾ ಕಾರಣ ಅನ್ನುವಂತೆ ನೋಡಿ ಉಪವಾಸ ಶಾಲೆಯಿಂದ ಮಠದ ಕಿರುಕುಳ ಶಾಲೆಗೆ ಹೊರಟರು. ಅಲ್ಲಿ ಒಂದು ಮುಳ್ಳಿನ ಹಾಸಿಗೆಯಲ್ಲಿ ಮಲಗಿದರು. ಎತ್ತ ಹೊರಳಿದರತ್ತ ಶ್ರೀಸಾಮಾನ್ಯ ನಿಗೆ ಮುಳ್ಳು ಚುಚ್ಚುವುದು ಎಂಬುದರ ಸಂಕೇತ ಅದು ಎಂದು ಮಡ್ಡಿ ಹೇಳಿದ. ಗುರುಗಳು ಯಾತನೆಯಿಂದ ಕಣ್ಣೀರು ಹಾಕಿದರು.

"ಇರುವ ಹಾಸಿಗೆಗಳಲ್ಲೆಲ್ಲಾ ಇದೇ ಮೃದುವಾದದ್ದು."

—ಎಂದು ವಿವರ ಹೇಳಿದ್ದ ಮುಂಕ. ಗಾಂಪರೊಡೆಯರು ಆಡಿದ ಮಾತಿನ ಒಳ ತಿರುಳು ಬಹಳವಿತ್ತು. ಅದನ್ನೇ ಯೋಚಿಸುತ್ತಾ ಹೋಟಲಿಗೆ ಹೋದೆ.

ದಾಶರಥಿದೀಕ್ಷಿತ್


For 3 way Beauty Treatment....
RAJA
SNOW
RAJA
AMLA
RAJA
Kasturi Soap
MANYAM & CO
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY.

Reg. No. B.G. 343 KORAVANJI October 1965

ಹೊಸ ಪುಸ್ತಕ

# ನಮ್ಮ ಅಡಿಗೆ
# ಪಥ್ಯದ ಊಟ

ನಮ್ಮಲ್ಲಿ ಬಳಕೆಯಲ್ಲಿರುವ ಸಸ್ಯಾಹಾರಿ ಅಡಿಗೆಗಳ ವೈಜ್ಞಾನಿಕ ವಿವರಗಳು

**ವೈದ್ಯರಿರಿಸುವ ಪಥ್ಯವನ್ನು ಸುಲಭವಾಗಿ ಆಚರಿಸಲು ಎಲ್ಲಾ ವಿವರಗಳನ್ನೂ ಕೊಡುವ ಪುಸ್ತಕ**

ಸ್ಥೂಲ ಶರೀರದವರಿಗೆ, ಮಧುಮೇಹ ಇರುವವರಿಗೆ ಅತ್ಯುಪಯುಕ್ತವಾದುದು

ಲೇಖಕರು :

ಡಾ॥ ಎಂ. ಶಿವರಾಂ, ಬಿ.ಎ., ಎಂ.ಬಿ.ಬಿ.ಎಸ್.

ಶ್ರೀಮತಿ ವಿಮಲಾ ಬಿ. ಶೇಷಾದ್ರಿ, ಬಿ.ಎಸ್.ಸಿ.

ವಿವರಗಳಿಗೆ :

ಭಾಸ್ಕರ್ ಪ್ರಕಟನಾಲಯ
E-100, ಸಂಬೇದಾರ್ ಚತ್ರಂ ರಸ್ತೆ
ಬೆಂಗಳೂರು-೯

ಬೆಲೆ ೩ ರೂಪಾಯಿ

Edited and Published by M. Shivaram
Printed by B. S. Iyengar, Bangalore-2